### ನಿಮ್ಮ ಸಿಎಂಗೆ ಸ್ವಲ್ಪ ತಿಳುವಳಿಕೆ ಹೇಳಿ: ವೇದಿಕೆಯಲ್ಲೇ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಕುಮಾರಸ್ವಾಮಿ ಹಿತವಚನ

# ಸಾಲ ಮಾಡಿದ ದುಡ್ಡೆಲ್ಲವನ್ನು ಸರಕಾರ ಏನು ಮಾಡುತ್ತಿದೆ?

• **ಉದಯವಾಹಿನಿ, ಮೈಸೂರು**

ಧಾರ್ಮಿಕ ಕಾರ್ಯಕ್ರಮವೊಂದರ ವೇದಿಕೆಯಲ್ಲೇ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಿಎಂ ಸಿದ್ದರಾಮಯ್ಯ ವಿರುದ್ಧ ಅಸಮಾಧಾನವನ್ನು ಹೊರಹಾಕಿದ್ದಾರೆ. ಸಭೆಯಲ್ಲೇ, ಸಿದ್ದರಾಮಯ್ಯ ಸಂಪುಟದ ಸಚಿವೆ, ನಿಮ್ಮ ಮುಖ್ಯಮಂತ್ರಿಗಳಿಗೆ ತಿಳುವಳಿಕೆಯನ್ನು ಹೇಳಿ ಎಂದು ವಿನಂತಿಸಿಕೊಂಡಿದ್ದಾರೆ. ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಮಾದಹಳ್ಳಿಯ ಶ್ರೀ ಉಕ್ಕಿನಕಂತೆ ಮಠದಲ್ಲಿ ನಡೆದ ಶ್ರೀ ಗುರು ಬೂದಿಸ್ವಾಮಿಗಳ 397ನೇ ಆರಾಧನೆ ಹಾಗೂ 63 ಪ್ರಮಥರ ಪೂಜೆ, ನೂತನ ಕಟ್ಟಡ ಉದ್ಘಾಟನೆ ಕಾರ್ಯಕ್ರಮದಲ್ಲಿ ಕುಮಾರಸ್ವಾಮಿ, ರಾಜ್ಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆದಿಯಾಗಿ ಹಲವರು ಪಾಲ್ಗೊಂಡಿದ್ದರು. ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ಬಗ್ಗೆ ಕುಮಾರಸ್ವಾಮಿ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸರ್ಕಾರದ ಅಂಕಿಅಂಶಗಳನ್ನು ಬಜೆಟ್ ಪ್ರತಿಯಲ್ಲಿ ಮುದ್ರಿಸಿದರೆ ಅದರಿಂದ ಏನು ಪ್ರಯೋಜನ ಎಂದು ಪ್ರಶ್ನಿಸಿದ್ದಾರೆ.


ಉದಯವಾಹಿನಿ ಚಿತ್ರ

**ರಾಜ್ಯಕ್ಕೆ ಕರಾಳ ದಿನ**

**ಬರೀ ಅಂಕಿ ಅಂಶಗಳನ್ನು ಸರ್ಕಾರ ತೋರಿಸಿದರೆ ಏನು ಪ್ರಯೋಜನ?:** ನಾನು ಈ ವಿಷಯದಲ್ಲಿ ರಾಜಕೀಯವನ್ನು ಮಾಡುತ್ತಿಲ್ಲ ಸರ್ಕಾರದಲ್ಲಿ ಇರುವವರು ಜನರ ಆಶೋತ್ತರಗಳನ್ನು ಈಡೇರಿಸುವುದು ಕರ್ತವ್ಯವಲ್ಲವೇ?

**ಸಾಲದ ಹಣ ಎಲ್ಲಿಗೆ ಹೋಗುತ್ತಿದೆ?**

**ಬಂಡವಾಳ ಹೂಡಿಕೆಯಾಗುತ್ತಿಲ್ಲ, ಸರ್ಕಾರಿ ಆಸ್ತಿಗಳು ನಿರ್ಮಾಣಗೊಳ್ಳುತ್ತಿಲ್ಲ, ಆದರೂ ಸಾಲಸಾಲ. ಹಾಗಾದರೆ, ಸಾಲದ ಹಣವೆಲ್ಲಾ ಎಲ್ಲಿಗೆ ಹೋಗುತ್ತಿದೆ? ರಾಜ್ಯದ ಸಾಲ ಈಗ 8.24 ಲಕ್ಷ ಕೋಟಿಗೆ ಬಂದು ನಿಂತಿದೆ. ಸಿಎಂಗೆ ತಿಳುವಳಿಕೆ ಹೇಳದೇ ಇದ್ದಲ್ಲಿ, ರಾಜ್ಯದ ಪರಿಸ್ಥಿತಿ ದಯನೀಯ ಸ್ಥಿತಿಗೆ ಹೋಗಲಿದೆ.**

**- ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ಇದೇ ರೀತಿಯಲ್ಲಿ ಸರ್ಕಾರ ನಡೆಸುತ್ತಾ ಬಂದರೆ, ರಾಜ್ಯಕ್ಕೆ ಕರಾಳ ದಿನ ಎದುರಾಗಲಿದೆ ಎನ್ನುವುದನ್ನು ನಾವು ಮರೆಯಬಾರದು ಎಂದು ಎಚ್.ಡಿ.ಕುಮಾರಸ್ವಾಮಿ ಎಚ್ಚರಿಕೆಯನ್ನು ನೀಡಿದ್ದಾರೆ.

**ವೇದಿಕೆಯಿಂದಲೇ ಸಚಿವೆಗೆ ಕುಮಾರಸ್ವಾಮಿ ವಿನಂತಿ:** ನನ್ನ ಸಹೋದರಿ (ಲಕ್ಷ್ಮೀ ಹೆಬ್ಬಾಳ್ಕರ್) ಇಲ್ಲೇ ವೇದಿಕೆಯಲ್ಲಿ ಕೂತಿದ್ದಾರೆ, ಅವರಿಗೊಂದು ಮಾತನ್ನು ಹೇಳಲು ಬಯಸುತ್ತೇನೆ. ಮಹಿಳೆಯರಿಗೆ ನಿಮ್ಮ ಇಲಾಖೆಯಿಂದ ಪ್ರತೀ ತಿಂಗಳು ಎರಡು ಸಾವಿರ ರೂಪಾಯಿ ಗೃಹಲಕ್ಷ್ಮೀ ನೀಡುತ್ತಿದ್ದೀರಿ. ಇದಕ್ಕೆ ನನ್ನ ತಕರಾರು ಏನೂ ಇಲ್ಲ, ನನ್ನ ವಿರೋಧವೂ ಇಲ್ಲ. ಮೂರು ವರ್ಷಗಳಿಂದ, ಎಪ್ಪತ್ತರಿಂದ ಎಪ್ಪತ್ತೈದು ಸಾವಿರ ಕೋಟಿ ರೂಪಾಯಿ ನೀಡಿರಬಹುದು. ಆದರೆ, ಇದಕ್ಕೆ ಹಣ ಎಲ್ಲಿಂದ ಹೊಂದಿಸುತ್ತಿದ್ದೀರಿ? ನಿಮ್ಮ ಮುಖ್ಯಮಂತ್ರಿಗಳಿಗೆ ತಿಳುವಳಿಕೆಯನ್ನು ಹೇಳಿ ಎಂದು ಕುಮಾರಸ್ವಾಮಿ, ವೇದಿಕೆಯಲ್ಲೇ ಲಕ್ಷ್ಮೀ ಹೆಬ್ಬಾಳ್ಕರ್'ಗೆ ಮನವಿ ಮಾಡಿದ್ದಾರೆ.

**ನಾನು ಸಾಲ ಮಾಡದೇ ಸಾಲಮನ್ನಾ ಮಾಡಿದ್ದೇನೆ**

**ನಾನು ಕೂಡಾ ಎರಡು ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದೆ, ನಾನು ಸಾಲಮನ್ನಾ ಮಾಡಿದ್ದೆ. ಸರ್ಕಾರದ ಬೊಕ್ಕಸದಲ್ಲಿ ಹಣವೇ ಇಲ್ಲ, ಸಾಲ ಹೇಗೆ ಮನ್ನಾ ಮಾಡುತ್ತೀರಿ ಎಂದು ಹಲವರು ಕುಹುಕ ಆಡಿದರು. ಆದರೆ, ಎಲ್ಲೂ ಸಾಲ ಮಾಡದೇ ಸಾಲಮನ್ನಾ ಮಾಡಿದ್ದೆ, ಮಾಡಿ ತೋರಿಸಿದ್ದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ.**

## ದೌರ್ಜನ್ಯ ವಿರುದ್ಧ ದನಿ ಎತ್ತಿ; ಸಬಲೀಕರಣಕ್ಕೆ ಕೈ ಜೋಡಿಸಿ: ನಟಿ ಸುಧಾರಾಣಿ

• **ಉದಯವಾಹಿನಿ, ಮಾಗಡಿ**

ಹೆಣ್ಣು-ಗಂಡು ಎಂಬ ತಾರತಮ್ಯವಿಲ್ಲದ ಸಮಾಜ ನಮ್ಮದಾಗಬೇಕು. ಸಮಾನ ಅವಕಾಶಗಳ ಜೊತೆಗೆ ಹಕ್ಕುಗಳ ರಕ್ಷಣೆ ಒತ್ತು ನೀಡಬೇಕು. ಮಹಿಳಾ ದೌರ್ಜನ್ಯದ ವಿರುದ್ಧ ದನಿ ಎತ್ತುವ ಜೊತೆಗೆ ಸ್ತ್ರೀಯರ ಸಬಲೀಕರಣವಾಗಬೇಕು. ಅದಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಸಿನಿಮಾ ನಟಿ ಸುಧಾರಾಣಿ ಹೇಳಿದರು.

ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ತಾಲ್ಲೂಕಿನ ಜ್ಯೋತಿಪಾಳ್ಯದಲ್ಲಿರುವ ಅಜ್ಜಿ ಕಲಿಕಾ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ, ಹೆಣ್ಣಿನ ಮೇಲಿನ ದೌರ್ಜನ್ಯ ಕೊನೆಗೊಳಿಸುವ ಜಾಗತಿಕ ಆಂದೋಲನಕ್ಕೆ ಒಗ್ಗಟ್ಟಿನ ಬೆಂಬಲ, ಅಭಿವ್ಯಕ್ತಿ ಕುರಿತ ಒನ್ ಬಿಲಿಯನ್ ರೈಸಿಂಗ್ 2026 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಹಿಳೆಯರ ಸ್ವಾವಲಂಬನೆ, ಸಬಲೀಕರಣದಿಂದ ಮಾತ್ರ ದೌರ್ಜನ್ಯ ತಡೆಯ ಬಹುದಾಗಿದೆ ಈ ನಿಟ್ಟಿನಲ್ಲಿ ಹೆಣ್ಣಿಗೆ ಹೆಣ್ಣೆ ಶತ್ರು ಎಂಬ ಮಾತನ್ನು ಹುಸಿಗೊಳಿಸಬೇಕು. ಸಂಘಟಿತವಾಗಿ ದನಿ ಮೊಳಗಿಸಬೇಕು. ಆ ನಿಟ್ಟಿನಲ್ಲಿ ಅಜ್ಜಿ ಕೇಂದ್ರ ಕೈಗೊಂಡಿರುವ ಅಭಿಯಾನ ವಿಭಿನ್ನವಾಗಿದೆ. ಇಲ್ಲಿನ ಕಾರ್ಯ ಚಟುವಟಿಕೆಗಳು ಸ್ಫೂರ್ತಿದಾಯಕವಾಗಿವೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

ಕೇಂದ್ರದ ವ್ಯವಸ್ಥಾಪಕ ಟ್ರಸ್ಟಿ ಮಂಜು ಬಾಲ ಸುಬ್ರಮಣ್ಯಂ ಮಾತನಾಡಿ, ಮಹಿಳೆಯರಿಗೆ ತಮ್ಮ ಹಕ್ಕುಗಳ ಕುರಿತು ಅರಿವಿಲ್ಲದಿರುವುದೇ ಅವರ ಮೇಲಿನ ದೌರ್ಜನ್ಯಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರ ಹಕ್ಕುಗಳನ್ನು ಬೆಂಬಲಿಸಿ, ಲಿಂಗ ತಾರತಮ್ಯವಿಲ್ಲದ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಬೇಕು ಎಂದು ತಿಳಿಸಿದರು. ಮಹಿಳೆಯರ ಮಾನಸಿಕ ಆರೋಗ್ಯದ ಕುರಿತು ಮಾತನಾಡಿದ ವಕೀಲೆ ಸೆಹರ್ ಹಶ್ಮಿ, ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಅತಿ ಮುಖ್ಯ. ತಾವು ಎದುರಿಸುತ್ತಿರುವ ಮಾನಸಿಕ ಸಮಸ್ಯೆಗಳ ಕುರಿತು ಸ್ವತಃ ಮಹಿಳೆಯರಿಗೇ ಅರಿವಿರುವುದಿಲ್ಲ. ಈ ಬಗ್ಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

**ಎಲ್ಲಿಯವರೆಗೆ ದೌರ್ಜನ್ಯವನ್ನು ಪ್ರಶ್ನಿಸುವುದಿಲ್ಲವೋ ಅಲ್ಲಿಯವರೆಗೆ ಅದು ಜೀವಂತವಾಗಿರುತ್ತದೆ. ತಮ್ಮ ಮೇಲೆ ನಡೆಯುವ ದೌರ್ಜನ್ಯವನ್ನು ಮಹಿಳೆಯರು ಬಲವಾಗಿ ಖಂಡಿಸಬೇಕು. ದೌರ್ಜನ್ಯದ ವಿರುದ್ಧ ಇಡೀ ಸಮಾಜ ದನಿ ಮೊಳಗಿಸಬೇಕು**

**- ಶಬ್ನಂ ಹಶ್ಮಿ ಟ್ರಸ್ಟಿ ಅಜ್ಜಿ ಕಲಿಕಾ ಕೇಂದ್ರ, ಮಾಗಡಿ**

## ಧರಣಿ ಕೈಬಿಡಲು ಚಲುವರಾಯಸ್ವಾಮಿ ಮನವಿ

• **ಉದಯವಾಹಿನಿ, ಮದ್ದೂರು**

ತಾಲ್ಲೂಕಿನ ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಗೆ ಸೇರ್ಪಡೆ ಗೊಳಿಸಿರುವುದರ ವಿರುದ್ಧ ಗ್ರಾಮಸ್ಥರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿಯನ್ನು ಕೈಬಿಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮನವಿ ಮಾಡಿದರು. ತಾಲ್ಲೂಕಿನ ಗೆಜ್ಜಲಗೆರೆಯ ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂದೆ ಹಲವಾರು ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ಶನಿವಾರ ಭೇಟಿ ನೀಡಿದ ವೇಳೆ ಅವರು ಮಾತನಾಡಿದರು.

ಅಭಿವೃದ್ಧಿ ದೃಷ್ಟಿಯಿಂದ ಶಾಸಕ ಕೆ.ಎಂ. ಉದಯ್ ಅವರು ಗೆಜ್ಜಲಗೆರೆ ಸೇರಿದಂತೆ 4 ಗ್ರಾಮ ಪಂಚಾಯಿತಿಗಳನ್ನು ಮದ್ದೂರು ನಗರಸಭೆಗೆ ಸೇರ್ಪಡೆಗೊಳಿಸಿದ್ದಾರೆ. ಅಷ್ಟೇ ಅಲ್ಲದೇ ತಾಲ್ಲೂಕಿನಾದ್ಯಂತ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ಪ್ರಾರಂಭದ ದಿನಗಳಲ್ಲಿ ಈ ಕುರಿತು ನಿಮ್ಮಲ್ಲಿ ಹೆಚ್ಚು ಚರ್ಚೆಗಳಾಗದೆ ಇರುವುದು ಈ ಬೆಳವಣಿಗೆಗೆ ಕಾರಣವಾಗಿರಬಹುದು. ನಗರಸಭೆಗೆ ಸಂಬಂಧಿಸಿದ ಪ್ರಕ್ರಿಯೆಗಳು ಮುಂದುವರೆದಿರುವುದರಿಂದ ಪ್ರತಿಭಟನೆಯನ್ನು ಕೈಬಿಡಿ' ಎಂದರು.


ಉದಯವಾಹಿನಿ ಚಿತ್ರ



ರೈತ ಪರ ಹೋರಾಟಗಾರ್ತಿ ಸುನಂದಾ ಜಯರಾಂ ಮಾತನಾಡಿ, ಕಳೆದ 20 ದಿನಗಳ ಹಿಂದೆ ನಗರದ ಪ್ರವಾಸಿ ಮಂದಿರದಲ್ಲಿ ನಿಮ್ಮ ಅಧ್ಯಕ್ಷತೆಯಲ್ಲಿ ಸಭೆ ಕರೆದಾಗ ನಮ್ಮ ಆಶೋತ್ತರಗಳಿಗೆ ಸ್ಪಂದಿಸುವ ಭರವಸೆ ನೀಡಿದ್ದಿರಿ. ಈಗ ಪ್ರತಿಭಟನೆಯನ್ನು ಕೈಬಿಡಲು ಮನವಿ ಮಾಡುತ್ತಿದ್ದೀರಿ. ಆದರೆ ಯಾವುದೇ ಕಾರಣಕ್ಕೂ ನಮ್ಮ ಹೋರಾಟವು ನಿಲ್ಲುವುದಿಲ್ಲ ಹಾಗೂ ನಗರಸಭೆ ಸೇರ್ಪಡೆಗೆ ನಮ್ಮ ಗ್ರಾಮಸ್ಥರು ಒಪ್ಪುವುದಿಲ್ಲ ಎಂದು ಪಟ್ಟು ಹಿಡಿದರು. ಅದಕ್ಕೆ ಧರಣಿ ನಿರತ ಗ್ರಾಮಸ್ಥರು ಒಕ್ಕೊರಲಿನಿಂದ ದನಿಗೂಡಿಸಿದರು. ಮೊದಲು ನ್ಯಾಯಾಲಯದಲ್ಲಿ ತೀರ್ಪು ಏನು ಬರುತ್ತದೆ ಕಾಯುತ್ತೇವೆ ನಮ್ಮ ನಿರ್ಧಾರ ಅಚಲವಾಗಿದೆ ಎಂದು ಸುನಂದಾ ಜಯರಾಂ ಹೇಳಿದರು.

## ಹಾಲಿನ ದರ 50 ಪೈಸೆ ಹೆಚ್ಚಳ: ಮಂಜುನಾಥ ರೆಡ್ಡಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಉತ್ಪಾದಕರಿಗೆ ಮಾರ್ಚ್ 8ರಿಂದ ಜಾರಿ ಬರುವಂತೆ ಪ್ರತಿ ಲೀಟರ್ ಹಾಲಿಗೆ 50 ಪೈಸೆ ಹೆಚ್ಚಿಸಲು ಒಕ್ಕೂಟದ ಆಡಳಿತ ಮಂಡಳಿ ತೀರ್ಮಾನಿಸಿದೆ. ಈ ಮೂಲಕ ದಕ್ಷಿಣ ಕನ್ನಡ ಜಿಲ್ಲೆ ಹೊರತುಪಡಿಸಿ ರಾಜ್ಯದಲ್ಲಿ ಪ್ರತಿ ಲೀಟರ್ ಹಾಲಿಗೆ ಚಿಮುಲ್‌ನಿಂದ ಅತಿ ಹೆಚ್ಚಿನ ದರ ನೀಡಲಾಗುತ್ತಿದೆ ಎಂದು ಚಿಕ್ಕಬಳ್ಳಾಪುರ ಹಾಲು ಒಕ್ಕೂಟ (ಚಿಮುಲ್) ಅಧ್ಯಕ್ಷ ವಿ.ಮಂಜುನಾಥ ರೆಡ್ಡಿ ತಿಳಿಸಿದರು.

ಚಿಮುಲ್ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಜನವರಿಯಿಂದ ಹೆಚ್ಚಿಸಲಾಗಿತ್ತು. ಇದೀಗ ಒಕ್ಕೂಟದ ಲಾಭಾಂಶವನ್ನು ನೇರವಾಗಿ ಉತ್ಪಾದಕರಿಗೆ ನೀಡುವ ತೀರ್ಮಾನ ಮಾಡಲಾಗಿದೆ. ಈ ನಿಟ್ಟಿನಲ್ಲಿ ಮೇ ಅಂತ್ಯದವರೆಗೆ 50 ಪೈಸೆ ಹೆಚ್ಚುವರಿಯಾಗಿ ನೀಡಲಾಗುವುದು. ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ಒಟ್ಟು 36.90 ಲಭಿಸಲಿದೆ ಎಂದು ಹೇಳಿದರು.

ಒಕ್ಕೂಟದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಅಧಿಕಾರಿಗಳು, ನೌಕರರಿಗೆ ಯುಗಾದಿ ಬೋನಸ್ ನೀಡಲಾಗುವುದು. ಅಧಿಕಾರಿಗಳಿಗೆ ತಲಾ 75 ಸಾವಿರ, ನೌಕರರಿಗೆ ಶೇ 8.33 ರಷ್ಟು ಬೋನಸ್ ನೀಡಲಾಗುತ್ತಿದೆ. ಈ ಮೂಲಕ ಹಾಲು ಉತ್ಪಾದಕರು, ನೌಕರರ ಹಿತವನ್ನು ಒಕ್ಕೂಟವು ಕಾಯುತ್ತಿದೆ ಎಂದರು. ಜಿಲ್ಲೆಯಲ್ಲಿ ಪ್ರಸ್ತುತ ನಿತ್ಯ 5 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. 50 ಪೈಸೆ ಹೆಚ್ಚಳದಿಂದ ಒಕ್ಕೂಟಕ್ಕೆ ತಿಂಗಳಿಗೆ 60 ಲಕ್ಷ ಹೊರೆಯಾಗಲಿದೆ ಎಂದರು. ಜಿಲ್ಲೆಯ 60 ಸಾವಿರ ರಾಸುಗಳಿಗೆ ಶೇ 50ರಷ್ಟು ಪ್ರೀಮಿಯಂ ರಿಯಾಯಿತಿ ದರದಲ್ಲಿ ರಾಸು ವಿಮಾ ಸೌಲಭ್ಯ ಕಲ್ಪಿಸಲಾಗಿದೆ ರಾಸುಗಳನ್ನು ರೋಗಗಳಿಂದ ರಕ್ಷಿಸುವ ಕುರಿತು ರೈತರಿಗೆ ಸೂಕ್ತ ಸಲಹೆ ಸೂಚನೆ ಜೊತೆಗೆ ಕಾಲ ಕಾಲಕ್ಕೆ ಕಾಲುಬಾಯಿ ಜ್ವರ ಸೇರಿ ಇನ್ನಿತರೆ ಲಸಿಕೆಗಳನ್ನು ಲಸಿಕೆ ಹಾಕಿಸಲಾಗುತ್ತಿದೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ನಿರ್ದೇಶಕ ಕೆ.ವಿ.ನಾಜರಾಜ್ ಮಾತನಾಡಿ, ಪ್ರಸ್ತುತ ಹಾಲಿನ ಉತ್ಪಾದನೆ ಕಡಿಮೆಯಾಗಿದೆ. ಒಕ್ಕೂಟದ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಇದೆ. ಹಾಲಿಗೆ ಹೆಚ್ಚಿನ ಬೇಡಿಕೆಯಿದೆ. ಆದ್ದರಿಂದ ಹಾಲಿನ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು. ಈಗಾಗಲೇ ಸರ್ಕಾರದಿಂದ ಮಂಜೂರಾಗಿರುವ 9.14 ಎಕರೆಯಲ್ಲಿ ಪ್ಯಾಕಿಂಗ್ ಘಟಕ ನಿರ್ಮಿಸಲು ಉದ್ದೇಶಿಸಲಾಗಿದೆ ಜಿಲ್ಲಾ ಉಸ್ತುವಾರಿ ಸಚಿವರು ಘಟಕಕ್ಕೆ ಅಗತ್ಯವಿರುವ ಅನುದಾನವನ್ನು ಮಂಜೂರು ಮಾಡಲು ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಒತ್ತಾಯಿಸಿದರು.

## ಮೀಸಲಾತಿ ಹೆಸರಲ್ಲಿ ವಿಭಜನೆ ಖಂಡಿಸಿ ಪ್ರತಿಭಟನೆ

• **ಉದಯವಾಹಿನಿ, ರಾಮನಗರ**

ರಾಜ್ಯ ಸರ್ಕಾರವು ಒಳ ಮೀಸಲಾತಿ ಮೂಲಕ ಪರಿಶಿಷ್ಟ ಜಾತಿ ಹಾಗೂ ಅಲೆಮಾರಿ ಸಮುದಾಯಗಳನ್ನು ಒಡೆದಾಳುತ್ತಿದೆ. ಮೀಸಲಾತಿಗೆ ಆಧಾರವಾಗಿರುವ ನ್ಯಾಯಮೂರ್ತಿ ನಾಗಮೋಹನ ದಾಸ್ ವರದಿ ತಿರಸ್ಕರಿಸಲು ಆಗ್ರಹಿಸಿ, ಪರಿಸಿಷ್ಟ ಬಲಗೈ ಜಾತಿ ಹಿತರಕ್ಷಣಾ ಸಮಿತಿಯಿಂದ ಮಾರ್ಚ್ 9ರಂದು ಕನಕಪುರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಧಮ್ಮ ದೀವಿಗೆ ಟ್ರಸ್ಟ್‌ನ ಮಲ್ಲಿಕಾರ್ಜುನ ಹೇಳಿದರು.

ಒಂದೇ ತಾಯಿ ಮಕ್ಕಳಂತಿದ್ದ ಪರಿಶಿಷ್ಟ ಸಮುದಾಯದ 101 ಜಾತಿಗಳನ್ನು ಒಳ ಮೀಸಲಾತಿ ಹೆಸರಿನಲ್ಲಿ ಹೋಳಾಗಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆಯುತ್ತಿವೆ. ಇದುವರೆಗೆ ಅಣ್ಣ-ತಮ್ಮಂದಿರಂತಿದ್ದ ಸಮುದಾಯಗಳು ಈಗ ಪರಸ್ಪರ ದೂಷಣೆಯಲ್ಲಿ ತೊಡಗಿದ್ದಾರೆ ಎಂದು ನಗರದ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

ಬೇರೆ ಸಮುದಾಯಗಳಲ್ಲಿ ಇಲ್ಲದ ಒಳ ಮೀಸಲಾತಿಯನ್ನು ಪರಿಶಿಷ್ಟರಲ್ಲೇ ತಂದು, ಅವರಲ್ಲಿ ಮತ್ತಷ್ಟು ಒಡಕು ಮೂಡಿಸಲಾಗುತ್ತಿದೆ ಆ ಮೂಲಕ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲಾ ಪಕ್ಷಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿವೆ. ಇದರಿಂದಾಗಿ ಪರಿಶಿಷ್ಟ ಸಮುದಾಯಗಳು ಶಾಶ್ವತವಾಗಿ ಪರಸ್ಪರ ಕೆಸರೆರಚಾಟದಲ್ಲಿ ತೊಡಗುವಂತೆ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಅತಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ಪರಿಶಿಷ್ಟ ಸಮುದಾಯಗಳು ಒಂದಾಗಿ ರಾಜಕೀಯ ಶಕ್ತಿಯಾಗಿ ಬೆಳೆಯದಂತೆ ತಡೆಯುವ ಉದ್ದೇಶದಿಂದ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿರುವ ಮನುವಾದಿಗಳು ಒಳ ಮೀಸಲಾತಿ ಹೆಸರಿನಲ್ಲಿ ಕುತಂತ್ರ ಹೆಣೆದಿದ್ದಾರೆ. ಆ ಮೂಲಕ ದಲಿತರು ಬೀದಿಯಲ್ಲಿ ಜಗಳವಾಡುವಂತೆ ಮಾಡಿದ್ದಾರೆ ಎಂದರು.


ಉದಯವಾಹಿನಿ ಚಿತ್ರ

ಒಳ ಮೀಸಲಾತಿ ವಿಚಾರವು ಇದೀಗ ರಾಜ್ಯ ಸರ್ಕಾರ, ರಾಜ್ಯಪಾಲ, ಹೈಕೋರ್ಟ್, ಕೇಂದ್ರ ಸರ್ಕಾರ, ರಾಷ್ಟ್ರಪತಿ, ಸುಪ್ರೀಂ ಕೋರ್ಟ್ ಅಂಗಳದಲ್ಲಿ ಅಲ್ಲಿಂದಿಲ್ಲಿಗೆ ಓಡಾಡುತ್ತಿದೆ ಇದರಿಂದಾಗಿ, ಸರ್ಕಾರಿ ಉದ್ಯೋಗಗಳಿಗೆ ನೇಮಕಾತಿ ಸೇರಿದಂತೆ ಹಲವು ವಿಷಯಗಳಲ್ಲಿ ಗೊಂದಲಗಳು ಸೃಷ್ಟಿಯಾಗಿವೆ. ಇದು ಪರಿಶಿಷ್ಟ ಸಮುದಾಯದ ಜನರ ಬದುಕಿನ ಜೊತೆಗಿನ ಚೆಲ್ಲಾಟವಾಗಿದೆ ಎಂದು ಹೇಳಿದರು.

ಮೀಸಲಾತಿ ಆಶಯವನ್ನು ಕಾಪಾಡುವ ಮೂಲಕ ಹೊಲೆಯ, ಮಾದಿಗ, ಆದಿವಾಸಿ, ಅಲೆಮಾರಿಗಳೆಲ್ಲರನ್ನೂ ಒಂದೇ ತಾಯಿಯ ಮಕ್ಕಳಂತೆ ಕಾಣುವಂತಾಗಬೇಕು. ಇದಕ್ಕೆ ತದ್ವಿರುದ್ಧವಾಗಿರುವ ಸರ್ಕಾರದ ಇಬ್ಬಗೆಯ ನೀತಿಯನ್ನು ಖಂಡಿಸಿ ಕನಪುರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಅಂದು ಅಯ್ಯಪ್ಪ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಮಾಡಿ. ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

## ಹಳಿ ತಪ್ಪಿದ ಆಡಳಿತ ವ್ಯವಸ್ಥೆ : ತಾಲ್ಲೂಕಿನಲ್ಲಿ ವ್ಯಾಪಕ ಭ್ರಷ್ಟಾಚಾರ : ರೈತ ಸಂಘ ಆರೋಪ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನಲ್ಲಿ ಹಳಿ ತಪ್ಪಿದ ಆಡಳಿತ ವ್ಯವಸ್ಥೆಯಿಂದ ಸಾರ್ವಜನಿಕ ಸೇವೆಗಳ ವೈಫಲ್ಯಕ್ಕೆ ಕಾರಣವಾಗುತ್ತಿದ್ದು ಇಲಾಖೆಗಳ ಆಡಳಿತಾತ್ಮಕ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದಿಂದ ಸಾರ್ವಜನಿಕರು ಬೇಸತ್ತುಹೋಗಿದ್ದಾರೆ, ಅಧಿಕಾರಿಗಳ ಧನ ದಾಹಕ್ಕೆ ಕಡಿವಾಣ ಹಾಕುವಲ್ಲಿ ಶಾಸಕರು ಹಾಗೂ ಜಿಲ್ಲಾಡಳಿತ ಸಂಪೂರ್ಣವಾಗಿ ವಿಫಲವಾಗಿದೆ ಎಂದು ರೈತ ಸಂಘ ತಾಲ್ಲೂಕು ಅಧ್ಯಕ್ಷ ಹಂಗಳ ದಿಲೀಪ್ ಆರೋಪಿಸಿದರು.

ಭಾನುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ತಾಲ್ಲೂಕಿನಲ್ಲಿ ವ್ಯಾಪಕ ಭ್ರಷ್ಟಾಚಾರ ತಾಂಡವಾಡುತ್ತಿದ್ದು ಆಡಳಿತ ವ್ಯವಸ್ಥೆ ಸುಧಾರಣೆ ಕಂಡಿಲ್ಲ, ಅಧಿಕಾರಿಗಳ ಹಣದಾಹಕ್ಕೆ ಸಾರ್ವಜನಿಕರು ಬೆವರು ಬಸಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಶಿಶು ಅಭಿವೃದ್ಧಿ ಇಲಾಖೆಯಲ್ಲಿನ ಸಿಡಿಪಿಓ ಹೇಮಾವತಿ ಅವರು ಕಳೆದ ಮೂರು ವರ್ಷಗಳಲ್ಲಿ ಸ್ವಅಭಿವೃದ್ಧಿಗೆ ತೋರಿದ ಆಸಕ್ತಿಯನ್ನ ಅಂಗನವಾಡಿ ಉನ್ನತಿಗೆ ತೋರಲಿಲ್ಲ, ಮಕ್ಕಳಿಗೆ ನೀಡುವ ತತ್ತಿಯಲ್ಲೂ ಪಾಲುದಾರಿಕೆ ತನ ತೋರುವ ಇವರು ಹಾಲಿನ ಪುಡಿಯನ್ನ ಮೈಸೂರು ಮೂಲದ ಐಸ್ ಕ್ರೀಮ್ ಕಾರ್ಖಾನೆಗೆ ಸಾಗಾಟ ಮಾಡುತ್ತಿದ್ದಾರೆ. ಭಾಗ್ಯಲಕ್ಷ್ಮಿ ಬಾಂಡ್ ವಿತರಿಸಲು ತಲಾ ಒಬ್ಬರಿಗೆ 5 ಸಾವಿರ ಲಂಚಕ್ಕೆ ಪರೋಕ್ಷವಾಗಿ ಬೇಡಿಕೆಯಿಟ್ಟಿದ್ದಾರೆ , ಪ್ರತಿ ತಿಂಗಳು ತಾಲ್ಲೂಕಿನಲ್ಲಿನ ಎಲ್ಲಾ ಅಂಗನವಾಡಿ ಕೇಂದ್ರಗಳಿಂದಲೂ 2 ಸಾವಿರ ಹಣ ಕಪ್ಪಕಾಣಿಕೆಯಾಗಿ ಸಲ್ಲಿಕೆಯಾಗುತ್ತಿದೆ. ಮೂರು ವರ್ಷಗಳಿಂದ ಇಲ್ಲಿಯೇ ಜಾಂಡಾ ಹೂಡಿರುವ ಇವರು ಕೋಟ್ಯಂತರ ರೂ ಹಣವನ್ನ ಅಕ್ರಮವಾಗಿ ಸಂಪಾದಿಸಿದ್ದು ಕೂಡಲೇ ಇವರ ವಿರುದ್ಧ ಲೋಕಾಯುಕ್ತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

**ವಿಡಿಯೋ ಸಮೇತ ದೂರು**

**ನಾಡ ಕಚೇರಿಗಳಲಿ ಗ್ರಾಮ ಲೆಕ್ಕಾಧಿಕಾರಿಗಳು ಲಂಚ ಪಡೆಯುವ ವಿಚಾರವಾಗಿ ಈ ಹಿಂದೆ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಸಾಕ್ಷಿ ಸಮೇತವಾಗಿ ಲಿಖಿತ ಮನವಿ ಸಲ್ಲಿಸಿ ಎಂದು ಹೇಳಿದ್ದರು. ಅದರಂತೆ ವಿಡಿಯೋ ಸಮೇತ ದೂರು ನೀಡಿ 3 ತಿಂಗಳಾದರು ಇನ್ನೂ ಕ್ರಮವಾಗಿಲ್ಲ. ಆದ್ದರಿಂದ ಅಧಿಕಾರಿಗಳು ಇನ್ನೂ ಹೆಚ್ಚಿನ ಭ್ರಷ್ಟಾಚಾರದಲ್ಲಿ ತೊಡಗಿ ಜನರಿಂದ ಹಣ ವಸೂಲಿಗೆ ಇಳಿದಿದ್ದಾರೆ. ಹೀಗಿದ್ದರೂ ಕೂಡ ಜಿಲ್ಲಾಡಳಿತ ನಿರ್ಲಕ್ಷ್ಯ ವಹಿಸಿದೆ. ಕೂಡಲೇ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ವಹಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.**

ತಾಲ್ಲೂಕಿನಿಂದ ಕೇರಳ-ತಮಿಳುನಾಡಿಗೆ ನಿಯಮ ಬಾಹೀರವಾಗಿ ಪ್ರತಿನಿತ್ಯ 200ಕ್ಕೂ ಅಧಿಕ ಟಿಪ್ಪರ್ ಲಾರಿಗಳು ಓವರ್ ಲೋಡ್, ಪರವಾನಗಿ, ನಂಬರ್ ಬೋರ್ಡ್ ಗಳಿಲ್ಲದೆ ಅಕ್ರಮವಾಗಿ ಎಂ.ಸ್ಯಾಂಡ್, ಜಲ್ಲಿಕಲ್ಲು ಸೇರಿದಂತೆ ಇನ್ನಿತರ ಖನಿಜ ಸಂಪತ್ತನ್ನು ತುಂಬಿಕೊಂಡು ಲೂಡಿ ಮಾಡುತ್ತಿದ್ದರೂ ಸಹ ಗಣಿ ಇಲಾಖೆ, ಪೊಲೀಸರು, ಆರ್‌ಟಿಓ ಅಧಿಕಾರಿಗಳು ಮೌನ ವಹಿಸಿದ್ದಾರೆ. ಈ ಮೂಲಕ ಅವರೇ ದಂಧೆಯಲ್ಲಿ ಶಾಮೀಲಾಗಿದ್ದಾರೆ ಎಂಬ ಅನುಮಾನ ಮೂಡಿದೆ. ಪಡಿತರ ಅಕ್ಕಿಯಲ್ಲಿಯೂ ಸಹ ಹಣ ವಸೂಲಿ ನಡೆಯುತ್ತಿದ್ದು, ಎಲ್ಲಾ ನ್ಯಾಯಾಬೆಲೆ ಅಂಗಡಿಗಳಲ್ಲಿ ಅಧಿಕಾರಿಗಳಿಗೆ 5 ಸಾವಿರ ಹಣ ಕೊಡಬೇಕಾಗಿದೆ. ಪಡಿತರ ಅಕ್ಕಿಯೂ ಸಹ ಗುಣಮಟ್ಟದಿಂದ ಪೂರೈಕೆಯಾಗದೆ ಕಳಪೆಯಿಂದ ಕೂಡಿದೆ. ಜೊತೆಗೆ ತಹಸೀಲ್ದಾರ್ ತನ್ಮಯ್ ಕೂಡ ನಿಷ್ಕ್ರೀಯವಾಗಿದ್ದು, ಸಾರ್ವಜನಿಕರ ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಅಸಮಾಧಾನ ಹೊರ ಹಾಕಿದರು.

ರೈತ ಸಂಘ ಜಿಲ್ಲಾ ಉಪಾಧ್ಯಕ್ಷ ಹಂಗಳ ಮಾಧು, ಕಾರ್ಯಾಧ್ಯಕ್ಷ ಲೋಕೇಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕುಮಾರ್, ಬಸವರಾಜು, ಸುರೇಶ್, ಕಿಶೋರ್ , ರಾಜೇಶ್ ಇತರರು ಇದ್ದರು.

## ಮಿನಿ ನ್ಯೂಸ್

### 28 ಕುರಿ ಸಾವಿಗೆ ವಿಷಕಾರಿ ತಪಾಲ್ ಕಾಯಿ ಕಾರಣ

• **ಉದಯವಾಹಿನಿ, ಕನಕಪುರ**

ತಾಲ್ಲೂಕಿನ ಸಾತನೂರು ಹೋಬಳಿ ಅಚ್ಚಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೊಲ್ಲರದೊಡ್ಡಿ ಗ್ರಾಮದಲ್ಲಿ ಸಾವನಪ್ಪಿರುವ ಕುರಿಗಳು ಕಪಾಲ್ ಕಾಯಿ ತಿಂದು ಸಾವನಪ್ಪಿವೆ ಎಂದು ಪಶು ಇಲಾಖೆ ಸಹಾಯಕ ನಿರ್ದೇಶಕ ಡಾ.ಯು.ಸಿ.ಕುಮಾರ್ ತಿಳಿಸಿದ್ದಾರೆ.

ಗೊಲ್ಲರದೊಡ್ಡಿಯ ಕಾಂತಮ್ಮ ತಿಮ್ಮರಾಜು ಅವರಿಗೆ ಸೇರಿದ 28 ಕುರಿಗಳು ಶುಕ್ರವಾರ ಸಂಜೆ ಜಮೀನಿನಲ್ಲಿ ಮೇವು ತಿಂದು ವಾಪಸ್ ಮನೆಗೆ ಬರುವಾಗ ಸಾವನಪ್ಪಿದ್ದವು. ಬೆಳಗ್ಗೆ ಪಶು ಇಲಾಖೆಯ ಡಾ.ಯು.ಸಿ.ಕುಮಾರ್ ಮತ್ತು ವೈದ್ಯರ ತಂಡ ಕುರಿಗಳ ಮರಣೋತ್ತರ ಪರೀಕ್ಷೆ ನಡೆಸಿದಾಗ ವಿಷಕಾರಿ ಕಪಾಲ್ ಕಾಯಿಗಳನ್ನು ತಿಂದು ಕುರಿಗಳು ಸಾವನ್ನಪ್ಪಿರುವುದಾಗಿ ಖಚಿತ ಪಡಿಸಿದ್ದಾರೆ. ಕುರಿಗಳ ಸಾವಿನಿಂದ ಸುಮಾರು 3.50 ಲಕ್ಷ ನಷ್ಟವಾಗಿದ್ದು ಪರಿಹಾರ ಕೊಡಿಸುವುದಾಗಿ ಅವರು ಭರವಸೆ ನೀಡಿದ್ದಾರೆ.

### ಬಜೆಟ್ ಟೀಕಿಸಿದ ಮಾಜಿ ಡಿಸಿಎಂ ಅಶ್ವಥ್ ನಾರಾಯಣ್

• **ಉದಯವಾಹಿನಿ, ಗೌರಿಬಿದನೂರು**

ತಾಲ್ಲೂಕಿನ ವಿದುರಾಶ್ವತ್ಥ ಮತ್ತು ನಗರದ ಶಾರದಾ ದೇವಿ ಮಂದಿರಕ್ಕೆ ಮಾಜಿ ಡಿಸಿಎಂ ಅಶ್ವತ್ಥ ನಾರಾಯಣ ಭೇಟಿ ನೀಡಿದರು. ಸರ್ಕಾರದಲ್ಲಿ ಹಣವಿದೆ, ಆದರೆ ಸರಿಯಾಗಿ ಬಳಕೆಯಾಗುತ್ತಿಲ್ಲ. ಕಳೆದ ಮೂರು ವರ್ಷಗಳಿಂದ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ಪೂರೈಕೆಯಾಗಿಲ್ಲ. ಗ್ಯಾರಂಟಿಗಳ ಹೆಸರಿನಲ್ಲಿ ಜನರ ಜೀವಕ್ಕೆ ಗ್ಯಾರಂಟಿ ಇಲ್ಲದೇ ಮಾಡಿದೆ ಬರೀ ಬಂಡಲ್ ಗ್ಯಾರಂಟಿ ನೀಡುತ್ತಿದ್ದಾರೆ. ಸರ್ಕಾರಕ್ಕೆ ನಾಲ್ಕು ರೂಪಾಯಿ ಬಂದರೆ, ಐವತ್ತು ಪೈಸೆ ಖರ್ಚು ಮಾಡುತ್ತಾರೆ. ಅದು ಸಹ ಪೋಲಾಗುತ್ತಿದೆ. ಸರ್ಕಾರ ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ತೊಡಗಿದೆ. ಆಡಳಿತ ನೆಲಕಚ್ಚಿದೆ. ಬಜೆಟ್ ಕೇವಲ ಮಂಡನೆಯಾಗುತ್ತದೆ ಅನುಷ್ಠಾನವಾಗುತ್ತಿಲ್ಲ ಎಂದರು. ಕರ್ನಾಟಕದ ಇತಿಹಾಸದಲ್ಲಿ, ರೈತರ ಆತ್ಮಹತ್ಯೆ, ಜನರ ಆತ್ಮಹತ್ಯೆ, ಗುತ್ತಿಗೆದಾರರ ಆತ್ಮಹತ್ಯೆ ನಡೆಯುತ್ತಿದೆ. ಸರ್ಕಾರ ತುಷ್ಟೀಕರಣದಲ್ಲಿ ತೊಡಗಿದೆ ಎಂದರು.

### ಪೌರ ಕಾರ್ಮಿಕನ ಮನೆಗೆ ಬೆಂಕಿ

• **ಉದಯವಾಹಿನಿ, ತುಮಕೂರು**

ನಗರದ ಬನಶಂಕರಿಯಲ್ಲಿ ರಾತ್ರಿ ಅಯ್ಯಪ್ಪ ಎಂಬುವರ ಮನೆಗೆ ಬೆಂಕಿ ಬಿದ್ದು, ಗೃಹೋಪಯೋಗಿ ವಸ್ತುಗಳು ಸುಟ್ಟು ಕರಕಲಾಗಿವೆ. ಯಾವುದೇ ಪ್ರಾಣ ಹಾನಿಯಾಗಿಲ್ಲ. ಅಯ್ಯಪ್ಪ ಮಹಾನಗರ ಪಾಲಿಕೆಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಅಯ್ಯಪ್ಪ ಮನೆಯಿಂದ ಹೊರಗಡೆ ಹೋಗಿದ್ದಾಗ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿಯಿಂದ ಮನೆಯಲ್ಲಿದ್ದ ದಿನ ಬಳಕೆ ವಸ್ತುಗಳು ಸುಟ್ಟು ಹೋಗಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಬೆಂಕಿ ನಂದಿಸಿದರು. ತಿಲಕ್ ಪಾರ್ಕ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

**ಪರಿಹಾರಕ್ಕೆ ಒತ್ತಾಯ:** ಅಯ್ಯಪ್ಪ ಕುಟುಂಬ ಮನೆ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ. ಜಿಲ್ಲಾ ಆಡಳಿತ, ಮಹಾನಗರ ಪಾಲಿಕೆ ತಕ್ಷಣ ಅಗತ್ಯ ಪರಿಹಾರ ನೀಡಬೇಕು. ಬದುಕು ಕಟ್ಟಿಕೊಳ್ಳಲು ನೆರವು ಕಲ್ಪಿಸಬೇಕು ಎಂದು ಸಿಪಿಎಂ ಒತ್ತಾಯಿಸಿದೆ. ಕುಟುಂಬಕ್ಕೆ ತಕ್ಷಣ ಆರ್ಥಿಕ ನೆರವು, ತಾತ್ಕಾಲಿಕ ವಸತಿ ವ್ಯವಸ್ಥೆ, ದಿನ ಬಳಕೆಯ ಸಾಮಗ್ರಿ, ಒದಗಿಸಬೇಕು. ವಿಳಂಬ ಮಾಡದೆ ಪರಿಹಾರ ವಿತರಿಸಬೇಕು ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್, ಜಿಲ್ಲಾ ಕಾರ್ಯದರ್ಶಿ ಎನ್.ಕೆ. ಸುಬ್ರಮಣ್ಯ, ನಗರ ಕಾರ್ಯದರ್ಶಿ ಎ.ಲೋಕೇಶ್ ಆಗ್ರಹಿಸಿದ್ದಾರೆ.

### ಬಜೆಟ್‌ನಲ್ಲಿ ಜಿಲ್ಲೆಗೆ ನಿರಾಶೆ: ಶಾಸಕ

• **ಉದಯವಾಹಿನಿ, ಗುಬ್ಬಿ**

ತಾಲ್ಲೂಕಿನ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಆರ್. ಶ್ರೀನಿವಾಸ್ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಶಾಸಕರು, ಸಚಿವರು ಸಭೆ ಸೇರಿ ಜಿಲ್ಲೆಗೆ ಅಗತ್ಯ ಕಾಮಗಾರಿಗಳ ಪಟ್ಟಿ ಮಾಡಿ ಬಜೆಟ್‌ನಲ್ಲಿ ಅನುದಾನ ಒದಗಿಸುವಂತೆ ಮನವಿ ಮಾಡಲಾಗಿತ್ತು. ಆದರೆ ಯಾವುದೇ ಅನುದಾನ ನೀಡಿಲ್ಲ. ಜಿಲ್ಲೆಯ ವಿಷಯ ಹೊರತುಪಡಿಸಿದರೆ ಒಟ್ಟಾರೆ ಮುಖ್ಯಮಂತ್ರಿ ಎಲ್ಲಾ ವರ್ಗಗಳಿಗೂ ಸಲ್ಲುವ ಉತ್ತಮ ಬಜೆಟ್ ಮಂಡಿಸಿದ್ದಾರೆ ಎಂದರು.

ತಾಲ್ಲೂಕಿನ ಚಿಕ್ಕೇಗುಡ್ಡ ಏತ ನೀರಾವರಿ, ಗಂಗಯ್ಯನ ಮಠ ಕುಡಿಯುವ ನೀರಿನ ಯೋಜನೆಗಳಿಗೆ ಅನುದಾನ ನೀಡಿದ್ದರಿಂದ ಈಗಾಗಲೇ ಕಾಮಗಾರಿಗಳು ಅಂತಿಮ ಹಂತದಲ್ಲಿವೆ. ಕೆಲವೇ ದಿನಗಳಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವವು ಎಂದು ತಿಳಿಸಿದರು. ವಸತಿ ಯೋಜನೆಯಡಿ ಗುಬ್ಬಿ ತಾಲ್ಲೂಕಿಗೆ ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿಯೂ ಯಾವುದೇ ಮನೆಗಳು ಮಂಜುರಾಗಿರಲಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳ ನಂತರವೂ ವಸತಿಗಳನ್ನು ಮಂಜೂರು ಮಾಡದಿರುವುದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ಕ್ಷೇತ್ರದ ಜನತೆಗೆ ಉತ್ತರಿಸಲು ಸಾಧ್ಯವಾಗುತ್ತಿಲ್ಲ ಎಂದರು.

### ರಾಮನಗರದಲ್ಲಿ ಬೀದಿನಾಯಿಗಳ ಹಾವಳಿ ತಡೆಗೆ ಹೈಟೆಕ್ ಡಾಗ್ ಶೆಲ್ಟರ್ ಸ್ಥಾಪನೆ: ಹೇಗಿರಲಿದೆ 2ಕೋಟಿ ವೆಚ್ಚದ ಆಶ್ರಯ ಕೇಂದ್ರ?

# 3ಸಾವಿರ ಬೀದಿನಾಯಿಗಳಿಗಾಗಿ ಡಾಗ್ ಶೆಲ್ಟರ್ ನಿರ್ಮಾಣ

• **ಉದಯವಾಹಿನಿ, ರಾಮನಗರ**

ನಗರದಲ್ಲಿರುವ ವ್ಯಗ್ರ, ಕಚ್ಚುವುದನ್ನೇ ಅಭ್ಯಾಸ ಮಾಡಿಕೊಂಡಿರುವ ಬೀದಿನಾಯಿಗಳನ್ನು ಶಾಶ್ವತವಾಗಿ ಆಶ್ರಯ ಕೇಂದ್ರದಲ್ಲಿ ಇಟ್ಟು ಪೋಷಣೆ ಮಾಡಲು ರಾಮನಗರ ನಗರಸಭೆ ಸಜ್ಜಾಗಿದ್ದು, ಡಾಗ್ ಶೆಲ್ಟರ್ ನಿರ್ಮಾಣಕ್ಕಾಗಿ 2 ಕೋಟಿ ರೂಪಾಯಿ ಹಣವನ್ನು ತನ್ನ ಬಜೆಟ್‌ನಲ್ಲಿ ಮೀಸಲಿರಿಸಿದೆ. ಬೀದಿ ನಾಯಿ ಕಡಿತ ಪ್ರಕರಣಗಳು ಏರಿಕೆ ಆಗುತ್ತಿರುವ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ಆಸ್ಪತ್ರೆ, ಶಾಲೆ, ಬಸ್ ನಿಲ್ದಾಣ, ರೈಲು ನಿಲ್ದಾಣ ಹಾಗೂ ಕ್ರೀಡಾ ಸಂಕೀರ್ಣಗಳಲ್ಲಿರುವ ಬೀದಿ ನಾಯಿಗಳ ಮಾಹಿತಿ ಪಡೆದು, ಅವುಗಳನ್ನು ಕೂಡಲೇ ಆಶ್ರಯ ತಾಣಗಳಿಗೆ ಸ್ಥಳಾಂತರಿಸಬೇಕು ಎಂದು ಆದೇಶ ನೀಡಿತ್ತು. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆ ಶೆಲ್ಟರ್ ನಿರ್ಮಿಸಿ, ನಗರದಲ್ಲಿರುವ ಬೀದಿನಾಯಿಗಳನ್ನು ಸ್ಥಳಾಂತರಿಸಲು ರಾಮನಗರ ನಗರಸಭೆ ಮುಂದಾಗಿದೆ.

**ನಗರದಲ್ಲಿವೆ 3000ಕ್ಕೂ ಹೆಚ್ಚು ಬೀದಿನಾಯಿಗಳು:** ಜನಸಾಮಾನ್ಯರು ಹೇಳುವ ಪ್ರಕಾರ ನಗರದಲ್ಲಿ 10 ಸಾವಿರಕ್ಕೂ ಹೆಚ್ಚು ಬೀದಿನಾಯಿಗಳಿವೆ. ಆದರೆ ನಗರಸಭೆಯ ಮಾಹಿತಿ ಪ್ರಕಾರ ನಗರದಲ್ಲಿ ಸುಮಾರು 2,500ದಿಂದ 3 ಸಾವಿರ ಬೀದಿ ನಾಯಿಗಳು ಇವೆ ಎನ್ನಲಾಗಿದೆ. ಈ ಪೈಕಿ ಈಗಾಗಲೇ 1150 ಬೀದಿ ನಾಯಿಗಳಿಗೆ ನಗರಸಭೆ ವತಿಯಿಂದ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಲಾಗಿದೆ.


ಉದಯವಾಹಿನಿ ಚಿತ್ರ

ಈ ವರ್ಷವೂ 1150 ಬೀದಿ ನಾಯಿಗಳಿಗೆ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ ನಡೆಸುವ ಯೋಜನೆಯಿದ್ದು, ಬಜೆಟ್‌ನಲ್ಲಿ 20 ಲಕ್ಷ ರೂಪಾಯಿಯನ್ನು ಮೀಸಲಿರಿಸಲಾಗಿದೆ. ಇದರ ಜತೆಗೆ ನಗರಸಭೆ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಬೀದಿ ನಾಯಿಗಳನ್ನು ಆಶ್ರಯ ಕೇಂದ್ರದಲ್ಲಿಟ್ಟು ಪೋಷಿಸಲು ಸಿದ್ಧವಾಗಿದೆ.

**ಮೊದಲಿಗೆ 250 ಬೀದಿ ನಾಯಿಗಳ ಸ್ಥಳಾಂತರ:** ಎಲ್ಲಾ ಬೀದಿ ನಾಯಿಗಳಿಗೂ ಆಶ್ರಯ ಕೇಂದ್ರ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವ್ಯಗ್ರ, ಕಚ್ಚುವ ಅಭ್ಯಾಸ ಇರುವ, ಜತೆಗೆ ಮಕ್ಕಳು, ಪ್ರಯಾಣಿಕರು, ರೋಗಿಗಳು ಹೆಚ್ಚಾಗಿ ಓಡಾಡುವ ಶಾಲಾ-ಕಾಲೇಜುಗಳು, ಆಸ್ಪತ್ರೆಗಳು, ಬಸ್ ನಿಲ್ದಾಣ, ಸರಕಾರಿ ಕಚೇರಿಗಳ ಆವರಣಗಳಲ್ಲಿರುವ ಬೀದಿ ನಾಯಿಗಳ ಮಾಹಿತಿ ಪಡೆಯಲಾಗಿದ್ದು, ಇಲ್ಲಿರುವ 250 ಬೀದಿ ನಾಯಿಗಳನ್ನು ಮೊದಲ ಹಂತದಲ್ಲಿ ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲು ಯೋಜನೆ ಸಿದ್ಧವಾಗಿದೆ.

**ಚಾಮನಹಳ್ಳಿ ಗ್ರಾಮದಲ್ಲಿ ಬೀದಿ ನಾಯಿ ಶೆಲ್ಟರ್:** ಕಣ್ವ ಬಳಿಯ ಚಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 254ರಲ್ಲಿ ರಾಮನಗರ ನಗರಸಭೆಗೆ ಸಂಬಂಧಿಸಿದ 30 ಎಕರೆ ಜಮೀನು ಖಾಲಿಯಿದ್ದು, ಈ ಜಾಗದಲ್ಲಿ ಬೀದಿ ನಾಯಿಗಳ ಶೆಲ್ಟರ್ ನಿರ್ಮಿಸಲು ನಗರಸಭೆ ಮುಂದಾಗಿದೆ. ಬಜೆಟ್‌ನಲ್ಲಿಯೂ ಸಹ ಇದನ್ನು ಪ್ರಸ್ತಾಪಿಸಲಾಗಿದೆ. ತಲಾ 125 ಬೀದಿ ನಾಯಿಗಳಿಗೆ ಆಶ್ರಯ ಒದಗಿಸುವ ಎರಡು ಶೆಲ್ಟರ್‌ಗಳನ್ನು ಇಲ್ಲಿ ನಿರ್ಮಾಣ ಮಾಡಲು ನಗರಸಭೆ ಮುಂದಾಗಿದೆ. 2 ಕೋಟಿ ರೂಪಾಯಿ ವೆಚ್ಚದಲ್ಲಿ ಅತ್ಯಂತ ವ್ಯವಸ್ಥಿತವಾಗಿ, ಆಧುನಿಕ ಮಾದರಿಯಲ್ಲಿ ಈ ಶೆಲ್ಟರ್‌ಗಳು ನಿರ್ಮಾಣವಾಗಲಿವೆ.

**ಹೇಗಿರಲಿದೆ ಬೀದಿನಾಯಿ ಆಶ್ರಯ ಕೇಂದ್ರ?:** ಪ್ರಾಣಿಗಳ ಜನನ ನಿಯಂತ್ರಣ ನಿಯಮ (ಎಬಿಸಿ) 2023ರ ಮಾರ್ಗಸೂಚಿಯ ಪ್ರಕಾರವೇ ನಗರಸಭೆ ಈ ಬೀದಿನಾಯಿಗಳ ಆಶ್ರಯ ಕೇಂದ್ರವನ್ನು ನಿರ್ಮಾಣ ಮಾಡಬೇಕಿದೆ. ಎಬಿಸಿ ನಿಯಮದ ಪ್ರಕಾರ ಆಶ್ರಯ ಕೇಂದ್ರಗಳಲ್ಲಿ ಬೀದಿನಾಯಿಗಳ ಪೋಷಣೆಗಾಗಿ ಆರೈಕೆ ಅಡುಗೆ ಮನೆ ಇರಬೇಕು. ಜತೆಗೆ ಇಲ್ಲಿರುವ ಬೀದಿ ನಾಯಿಗಳನ್ನು ಆರೈಕೆ ಮಾಡುವ ಸಿಬ್ಬಂದಿಗಾಗಿ ಕಾರ್ಮಿಕ ವಸತಿ ನಿಲಯಗಳು ಅಲ್ಲಿರಬೇಕು.

ಜತೆಗೆ ಬೀದಿನಾಯಿಗಳ ಆರೈಕೆಗೆ ಚಿಕಿತ್ಸಾ ಕೇಂದ್ರ, (ಮೆಡಿಕಲ್ ಏಡ್) ಸಹ ಅಲ್ಲಿರಬೇಕು. ಈ ಎಲ್ಲಾ ಮಾನದಂಡಗಳನ್ನು ಗಮನದಲ್ಲಿ ಇಟ್ಟುಕೊಂಡು ನಗರಸಭೆ ಬೀದಿನಾಯಿಗಳ ಆಶ್ರಯ ಕೇಂದ್ರವನ್ನು ನಿರ್ಮಿಸಲಿದೆ. ಜತೆಗೆ ಪ್ರತಿಯೊಂದು ಬೀದಿ ನಾಯಿಯನ್ನು ಸಹ ಪ್ರತ್ಯೇಕ ಸೆಲ್‌ನಲ್ಲಿ ಇರಿಸಲಾಗುತ್ತದೆ. ಅವುಗಳಿಗೆ ಅಲ್ಲಿಯೇ ಊಟ, ನೀರಿನ ವ್ಯವಸ್ಥೆ ಸಹ ಮಾಡಲಾಗುತ್ತದೆ. ಶೌಚಕ್ಕೂ ಅಲ್ಲಿಯೇ ವ್ಯವಸ್ಥೆ ಮಾಡಲಾಗುತ್ತದೆ.

**ನಗರದಲ್ಲಿ ಹೆಚ್ಚಾಗಿರುವ ಬೀದಿನಾಯಿಗಳ ಹಾವಳಿಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಚಾಮನಹಳ್ಳಿಯಲ್ಲಿ ಬೀದಿನಾಯಿಗಳ ಆಶ್ರಯ ಕೇಂದ್ರಗಳನ್ನು ನಿರ್ಮಾಣ ಮಾಡಲಾಗುತ್ತದೆ. 2 ಕೋಟಿ ರೂಪಾಯಿ ವೆಚ್ಚದಲ್ಲಿ ಡಾಗ್ ಶೆಲ್ಟರ್ ನಿರ್ಮಾಣವಾಗುತ್ತಿದ್ದು, ನಗರದಲ್ಲಿರುವ ಅಪಾಯಕಾರಿ ಬೀದಿನಾಯಿಗಳನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು.**

**-ಕೆ.ಶೇಷಾದ್ರಿ, ಅಧ್ಯಕ್ಷರು, ರಾಮನಗರ ನಗರಸಭೆ**

**ನಗರದಲ್ಲಿ ಬೀದಿನಾಯಿಗಳು ಹೆಚ್ಚುತ್ತಿರುವುದಕ್ಕೆ ಅವುಗಳಿಗೆ ಊಟ ಹಾಕುತ್ತಿರುವವರು ಕೂಡ ಕಾರಣ. ಹೀಗಾಗಿ ಯಾರೂ ಅವುಗಳಿಗೆ ಮನೆಯ ಮುಂದೆ ಅಥವಾ ಕಂಡಕಂಡಲ್ಲಿ ಊಟ ಹಾಕಬಾರದು. ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆ ಬದಿಗಳಲ್ಲಿ ಬೀದಿ ನಾಯಿಗಳಿಗೆ ಆಹಾರ ಹಾಕುವುದರಿಂದ ಅವುಗಳ ಹಾವಳಿ ಹೆಚ್ಚಾಗುತ್ತಿವೆ. ಇದನ್ನು ಸಾರ್ವಜನಿಕರು ಅರ್ಥ ಮಾಡಿಕೊಳ್ಳಬೇಕು.**

**-ಡಾ.ಜಯಣ್ಣ, ಆಯುಕ್ತರು, ರಾಮನಗರ ನಗರಸಭೆ**

**ಸಂತಾನ ಶಕ್ತಿ ಹರಣ ಚಿಕಿತ್ಸೆಗೆ ಆಪರೇಷನ್ ಥಿಯೇಟರ್**

**ಮೊದಲೆಲ್ಲಾ ನಗರದಲ್ಲಿರುವ ಬೀದಿನಾಯಿಗಳಿಗೆ ಪಶುಸೇವಾ ಇಲಾಖೆಯ ಆವರಣದಲ್ಲಿ ಸಂತಾನ ಶಕ್ತಿ ಹರಣ ಚಿಕಿತ್ಸೆ ಮಾಡಲಾಗುತ್ತಿತ್ತು. ಆದರೆ ಈಗ ಅಲ್ಲಿ ಸ್ಥಳದ ಸಮಸ್ಯೆ ಎದುರಾಗಿದೆ. ಹೀಗಾಗಿ ಆಶ್ರಯ ಕೇಂದ್ರ ನಿರ್ಮಾಣವಾಗುತ್ತಿರುವ ಚಾಮನಹಳ್ಳಿಯಲ್ಲಿಯೇ ಬೀದಿನಾಯಿಗಳ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆಗಾಗಿ ಆಪರೇಷನ್ ಥಿಯೇಟರ್ ನಿರ್ಮಾಣ ಮಾಡುವ ಬಗ್ಗೆಯೂ ಪ್ರಸ್ತಾವನೆಯಿದೆ.**

ಇರಾಕ್‌ನ ಬಾಗ್ದಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಮೇಲೆ ಕತ್ಯುಷಾ ರಾಕೆಟ್‌ಗಳ ದಾಳಿ

# ಎರಡನೇ ವಾರಕ್ಕೆ ಕಾಲಿಟ್ಟ ಮಧ್ಯಪ್ರಾಚ್ಯ ಸಂಘರ್ಷ



**ವಾಷಿಂಗ್ಟನ್:** ಇಸ್ರೇಲ್ - ಅಮೆರಿಕ ಜೊತೆಗೂಡಿ ಇರಾನ್ ಮೇಲೆ ದಾಳಿ ಎರಡನೇ ವಾರಕ್ಕೆ ಕಾಲಿಟ್ಟಿದ್ದು ದಾಳಿ, ಪ್ರತಿದಾಳಿ ಮುಂದುವರಿಸಿದ್ದು ಇದರ ಪರಿಣಾಮ ನಾರ್ವೆ ಸೇರಿದಂತೆ ಮತ್ತಿತರ ಕಡೆ ಅಮೆರಿಕ ರಾಯಬಾರ ಕಚೇರಿ, ವಿಮಾನ ನಿಲ್ದಾಣ, ತೈಲ ಸಂಗ್ರಹಗಾರ ಸೇರಿದಂತೆ ಮತ್ತಿತರ ಕಡೆ ದಾಳಿ ನಡೆಸಿದ್ದು ಇದರಿಂದ ಪ್ರಭಲ ಸ್ಫೋಟ ಸಂಭವಿಸಿದೆ.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಎರಡನೇ ವಾರಕ್ಕೆ ಪ್ರವೇಶಿಸಿದ್ದು, ಗಲ್ಫ್‌ನ ದೇಶಗಳಲ್ಲಿ ಉದ್ವಿಗ್ನತೆ ಹೆಚ್ಚಾಗಿದೆ. ಇಸ್ರೇಲ್ ,ಮುಂಜಾನೆ ದಕ್ಷಿಣ ಲೆಬನಾನ್‌ನಲ್ಲಿ ತನ್ನ ಮಿಲಿಟರಿ ಕಾರ್ಯಾಚರಣೆ ಹೆಚ್ಚು ಮಾಡಿದೆ, ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಕುಡ್ಸ್ ಪೋರ್ಸ್‌ನ ಲೆಬನಾನಿನ ಶಾಖೆಗೆ ಸಂಬಂಧಿಸಿದ ಕಮಾಂಡ್‌ರ್‌ಗಳು ಸೇರಿದಂತೆ ಅನೇಕ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ.

ಇರಾಕ್‌ನ ಬಾಗ್ದಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಮೇಲೆ ಕತ್ಯುಷಾ ರಾಕೆಟ್‌ಗಳು ದಾಳಿ ನಡೆಸಿದ ನಂತರ ಈ ದಾಳಿ ಸಂಭವಿಸಿದೆ, ಈ ದಾಳಿಯ ಹಿಂದೆ ಇರಾನ್ ಕೈವಾಡವಿರುವುದು ಸ್ಪಷ್ಟವಾಗಿದೆ. ಇರಾನ್‌ನ ರಾಜಧಾನಿ ಟೆಹ್ರಾನ್ ಮತ್ತು ಇಸ್ರೇಲ್‌ನ ಜೆರುಸಲೆಮ್‌ನಲ್ಲಿಯೂ ಸ್ಫೋಟಗಳು ಕೇಳಿಬಂದವು, ಹೊಸ ದಾಳಿಯಲ್ಲಿ ಇರಾನಿನ ಮೂಲ ಸೌಕರ್ಯವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ ಎಂದು ಇಸ್ರೇಲ್ ಹೇಳಿದೆ.

ದಕ್ಷಿಣ ಟೆಹ್ರಾನ್‌ನಲ್ಲಿರುವ ತೈಲ ಸಂಗ್ರಹಣಾ ವ್ಯವಸ್ಥೆ ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಆದರೆ, ಹತ್ತಿರದ ಸಂಸ್ಕರಣಾಗಾರಕ್ಕೆ ಯಾವುದೇ ಹಾನಿಯಾಗಿಲ್ಲ. ದಾಳಿಗಳು ನಗರದಾದ್ಯಂತ ಬೆಂಕಿ ಮತ್ತು ಹೊಗೆ ಹರಡಿದೆ.ಅಲ್ಬೋರ್ಜ್ ಪ್ರಾಂತ್ಯದ ಕರಾಜ್ ನಗರದಲ್ಲಿಯೂ ಸ್ಫೋಟಗಳ ಶಬ್ದ ಕೇಳಿಬಂದಿದೆ. ಈ ನಡುವೆ ಇಸ್ಫಹಾನ್ ವಿಮಾನ ನಿಲ್ದಾಣದಲ್ಲಿ ಇರಾನಿನ ಎಫ್ -14 ಜೆಟ್‌ಗಳನ್ನು ನಾಶಪಡಿಸಿದ್ದೇವೆ . ದಾಳಿಯನ್ನು ಇಸ್ರೇಲ್ ಸೇನೆ ಖಚಿತಪಡಿಸಿದೆ.

ಟೆಹ್ರಾನ್‌ನಲ್ಲಿರುವ ತೈಲ ಸಂಗ್ರಹಾಗಾರದ ಮೇಲೆ ದಾಳಿ ಮಾಡಿದ ಒಂದು ದಿನದ ನಂತರ ಈ ದಾಳಿಗಳು ನಡೆದವು, ಇದು ದೊಡ್ಡ ಬೆಂಕಿಗೆ ಕಾರಣವಾಯಿತು. ಈ ನಡುವೆ ಅಮೆರಿಕ ಮತ್ತು ಇಸ್ರೇಲ್ ನಡುವೆ ಯುರೇನಿಯಂನ ದಾಸ್ತಾನುಗಳನ್ನು ಭದ್ರಪಡಿಸಿಕೊಳ್ಳಲು ಇರಾನ್‌ಗೆ ವಿಶೇಷ ಪಡೆಗಳನ್ನು ನಿಯೋಜಿಸುವ ಸಾಧ್ಯತೆ ಹೆಚ್ಚಿದೆ . ಪ್ರಾದೇಶಿಕ ಉದ್ವಿಗ್ನತೆಗಳು ಗಲ್ಫ್ ರಾಜ್ಯಗಳ ಮೇಲೂ ಪರಿಣಾಮ ಬೀರಿವೆ. ದಾಳಿಯ ನಂತರ ಕುವೈತ್ ನಗರ ಮತ್ತು ಕುವೈತ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಂಕಿಗೆ ಆಹುತಿಯಾಗಿದೆ

ಸೌದಿ ಅರೇಬಿಯಾ ರಿಯಾದ್ ಬಳಿ ಹೆಚ್ಚುವರಿ ಡ್ರೋನ್ ಗಳನ್ನು ತಡೆಹಿಡಿಯಲಾಗಿದೆ ಉಲ್ಬಣಗೊಳ್ಳುತ್ತಿರುವ ಸಂಘರ್ಷದ ನಡುವೆ, ಚೀನಾ ಯುದ್ಧವನ್ನು ಟೀಕಿಸಿತು ಮತ್ತು ಅಂತರರಾಷ್ಟ್ರೀಯ ವಿವಾದಗಳನ್ನು ಬಲವಂತದ ಮೂಲಕ ಇತ್ಯರ್ಥಪಡಿಸಬೇಕು ಎಂದಿದೆ

ಇಸ್ರೇಲ್‌ನ ಮೂಲಸೌಕರ್ಯ ಗುರಿಯಾಗಿಸಿಕೊಂಡು ಇರಾನ್ ದಾಳಿ ನಡೆಸಿದ ಬೆನ್ನಲ್ಲೇ ಇರಾನ್ ರಾಜಧಾನಿ ಟೆಹ್ರಾನ್ ವಿಮಾನ ನಿಲ್ದಾಣದಲ್ಲಿ ಭಾರಿ ಸ್ಫೋಟಗಳು ಸಂಭವಿಸಿವೆ. ಇರಾನ್ ಇಸ್ರೇಲ್ ಮತ್ತು ಅಮೇರಿಕಾದ ವಾಯುನೆಲೆಗಳ ಮೇಲೆ ಹೊಸ ಕ್ಷಿಪಣಿ ದಾಳಿ ನಡೆದಿದೆ. ಇದರಿಂದ ಬಿಗುವಿನ ವಾತಾವರಣ ಸೃಷ್ಟಿಯಾಗಿದ್ದು ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರಗೊಂಡಿದೆ, ಯುದ್ಧ 9 ದಿನಕ್ಕೆ ಕಾಲಿಟ್ಟುದ್ದು ಸದ್ಯಕ್ಕೆ ನಿಲ್ಲುವ ಯಾವುದೇ ಲಕ್ಷಣ ಕಂಡುಬರುತ್ತಿಲ್ಲ ಮಧ್ಯಪ್ರಾಚ್ಯ ಸಂಘರ್ಷದಲ್ಲಿ ಹೆಲಿಕಾಪ್ಟರ್ ಒಳನುಸುಳುವಿಕೆ'ಯ ನಂತರ ಹಿಜ್ಬೊಲ್ಲಾ -ಇಸ್ರೇಲ್ ಪಡೆಗಳೊಂದಿಗೆ ಘರ್ಷಣೆ ನಡೆದಿದೆ, ಈ ಘರ್ಷಣೆಯಲ್ಲಿ ಸಾವು ನೋವುಗಳ ಬಗ್ಗೆ ಯಾವುದೇ ವರದಿ ಸದ್ಯಕ್ಕೆ ಲಭ್ಯವಾಗಿಲ್ಲ .

ನಾಲ್ಕು ಮಿಲಿಟರಿ ಹೆಲಿಕಾಪ್ಟರ್‌ಗಳು ಸಿರಿಯಾದಿಂದ ದಾಟಿ ಪೂರ್ವ ಲೆಬನಾನ್‌ನ ಬೆಕಾ ಕಣಿವೆಯಲ್ಲಿರುವ ನಬಿ ಶೀಟ್ ಬಳಿ ಇಳಿದ ನಂತರ ತನ್ನ ಹೋರಾಟಗಾರರು ಇಸ್ರೇಲಿ ಪಡೆಗಳನ್ನು ಹೊಡೆದುರುಳಿಸಿದ್ದಾರೆ ಎಂದು ಹಿಜ್ಬೊಲ್ಲಾ ಹೇಳಿದೆ.ಪಟ್ಟಣದ ಸ್ಮಶಾನದ ಬಳಿ ತನ್ನ ಹೋರಾಟಗಾರರು ಮುಂದುವರಿಯುತ್ತಿರುವ ಸೈನಿಕರನ್ನು ಎದುರಿಸಿದ್ದು ಭೀಕರ ಗುಂಡಿನ ಚಕಮಕಿಗೆ ಕಾರಣವಾಗಿದೆ ಎಂದು ಹಿಜ್ಬುಲ್ಲಾ ಗುಂಪು ಹೇಳಿದೆ.

**ನಾಗರಿಕರನ್ನು ಕೊಂದರೆ ಬೇಟೆ: ಟ್ರಂಪ್**

**ಅಮೆರಿಕದ ನಾಗರಿಕರನ್ನು ಕೊಂದರೆ ನಿಮ್ಮನ್ನು ಬೇಟೆಯಾಡುತ್ತೇವೆ ಎಂದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಇನ್ಮುಂದೆ ಮಧ್ಯಪ್ರಾಚ್ಯದ ಬೆದರಿಸುವ ರಾಷ್ಟ್ರವಲ್ಲ. ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ನಂತರ ಸಂಪೂರ್ಣ ಸೋತ ದೇಶವಾಗಿದೆ ಹೇಳಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಯುದ್ಧ ಎರಡನೇ ವಾರಕ್ಕೆ ಕಾಲಿಟ್ಟಿರುವುದರಿಂದ ಮುಂದಿನ ದಿನಗಳಲ್ಲಿ ಇರಾನ್ ಮತ್ತಷ್ಟು ಹೊಡೆ ಅನುಭವಿಸಲಿದೆ ಎಂದು ಎಚ್ಚರಿಸಿದ್ದಾರೆ. ಇರಾನ್ ಮಧ್ಯಪ್ರಾಚ್ಯದಲ್ಲಿರುವ ತನ್ನ ನೆರೆಹೊರೆಯವರಿಗೆ ಕ್ಷಮೆಯಾಚಿಸಿದೆ, ಶರಣಾಗತಿ ನೀಡಿದೆ.**

**ಇರಾನ್‌ಗೆ ಅಮೆರಿಕ ಶಾಕ್**

**ಇರಾನ್‌ಗೆ ಮತ್ತಷ್ಟು ಹೊಡೆತ**

**ನಾರ್ವೆಯ ಒಸ್ಲೋದಲ್ಲಿ ದಾಳಿ**

**ನಾರ್ವೆಯಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಬಳಿ ಇರಾನ್ ದಾಳಿ ನಡೆಸಿದಿದ್ದು ಬಾರಿ ಸ್ಫೋಟ ಸಂಭವಿಸಿದೆ, ಈ ನಡುವೆ ಇಸ್ರೇಲ್ ಇರಾನ್ ತೈಲ ಘಟಕದ ಮೇಲೆ ದಾಳಿ ನಡೆಸಿರುವ ಹಿನ್ನೆಲೆಯಲ್ಲಿ ಬೆಂಕಿಗೆ ಆಹುತಿಯಾಗಿದೆ. ನಾರ್ವೆಯ ರಾಜಧಾನಿ ಓಸ್ಲೋದಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಬಳಿ ಜೋರಾದ ಸ್ಫೋಟ ಕೇಳಿಬಂದಿದೆ. ಸದ್ಯಕ್ಕೆ ಸಾವು ನೋವು ಸಂಭವಿಸಿದ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಈ ಬಗ್ಗೆ ಇನ್ನಷ್ಟೇ ಮಾಹಿತಿ ಬರಬೇಕಾಗಿದೆ ಎಂದು ನಾರ್ವೆಯ ಪೊಲೀಸರು ತಿಳಿಸಿದ್ದಾರೆ. ಸ್ಫೋಟಕ್ಕೆ ಕಾರಣವೇನು ಅಥವಾ ಯಾರು ಭಾಗಿಯಾಗಿದ್ದಾರೆ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ ಎಂದು ಓಸ್ಲೋ ಪೊಲೀಸ್ ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ. ''ಪೊಲೀಸರು ರಾಯಭಾರ ಕಚೇರಿಯೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಮತ್ತು ಯಾವುದೇ ಗಾಯಗೊಂಡ ವ್ಯಕ್ತಿಗಳ ವರದಿಗಳಿಲ್ಲ ಎಂದು ಹೇಳಲಾಗಿದೆ.**

## ಇಸ್ಲಾಮೀಕರಣ ವಿರೋಧಿಸಿ ಪ್ರತಿಭಟನೆ



**ನ್ಯೂಯಾರ್ಕ್:** ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ಸಾರ್ವಜನಿಕ ಪ್ರದೇಶಗಳಲ್ಲಿ ನಡೆಯುವ ಮುಸ್ಲಿಂ ಪ್ರಾರ್ಥನೆಯನ್ನು ವಿರೋಧಿಸಿ ಪ್ರತಿಭಟನೆಗಳು ಭುಗಿಲೆದ್ದಿದ್ದು, ಈ ಬೆನ್ನಲ್ಲೇ, ನ್ಯೂಯಾರ್ಕ್ ಮೇಯರ್ ಜೋಹ್ರಾನ್ ಮಮ್ದಾನಿಯವರ ನಿವಾಸದ ಹೊರಗೆ ಅನುಮಾನಾಸ್ಪದ ಸ್ಫೋಟಕ ಸಾಧನಗಳನ್ನು ಎಸೆದಿರುವುದಾಗಿ ವರದಿಯಾಗಿದೆ.

ನ್ಯೂಯಾರ್ಕ್‌ನಲ್ಲಿ ಸಾರ್ವಜನಿಕ ಮುಸ್ಲಿಂ ಪ್ರಾರ್ಥನೆಯನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸಿ ಮತ್ತು ನಗರದಲ್ಲಿ ಹೆಚ್ಚುತ್ತಿರುವ ಆಪಾದಿತ ಇಸ್ಲಾಮೀಕರಣವನ್ನ ವಿರೋಧಿಸಿ, ಮುಸ್ಲಿಂ ಜನಾಂಗದ ಮೇಯರ್ ಜೋಹ್ರಾನ್ ಮಮ್ದಾನಿ ನಿವಾಸವಾದ ಗ್ರೇಸಿ ಮ್ಯಾನ್ಷನ್ ಹೊರಗೆ ತೀವ್ರ ಬಲಪಂಥೀಯ ಪ್ರಭಾವಿ ಜೇಕ್ ಲ್ಯಾಂಗ್ ಪ್ರತಿಭಟನೆ ನಡೆಸುತ್ತಿದ್ದರು. ಇಸ್ಲಾಂ ವಿರೋಧಿ ಪ್ರತಿಭಟನೆಯಲ್ಲಿ 20 ಮಂದಿ ಸೇರಿದರೆ,ಇದನ್ನು ವಿರೋಧಿಸಲು ಸುಮಾರು 125 ಮಂದಿ ಪ್ರತಿಭಟನಾಕಾರರು ಜಮಾಯಿಸಿದ್ದಾರೆ. ಈ ವೇಳೆ, ಇಸ್ಲಾಂ ವಿರೋಧಿ ಪ್ರತಿಭಟನಾಕಾರರು ಹಾಗೂ ಅದನ್ನು ವಿರೋಧಿಸಲು ಬಂದ ಪ್ರತಿಭಟನಾಕಾರರ ದೊಡ್ಡ ಗುಂಪಿನ ನಡುವೆ ಉದ್ವಿಗ್ನತೆ ಹೆಚ್ಚಾಗಿದ್ದು, ಮಾಮ್ದಾನಿ ನಿವಾಸದ ಕಡೆಗೆ ಅನುಮಾಸ್ಪದ ವಸ್ತುಗಳನ್ನು ಎಸೆಯಲು ಪ್ರಯತ್ನಿಸುವ ವಿಡಿಯೋ ವೈರಲ್ ಆಗಿದೆ.' ಸುಮಾರು 12 ಗಂಟೆ ಸಮಯದಲ್ಲಿ ಗಾಢನೀಲಿ ಬಣ್ಣದ ವಸ್ತ್ರ ಧರಿಸಿದ್ದ ಎಮಿರ್ ಬಾಲಟ್ ಎಂಬ 18 ವರ್ಷದ ಪ್ರತಿಭಟನಕಾರನು ಬೆಂಕಿ ಹಚ್ಚಿದ ಸಾಧನವನ್ನು ಎದುರಾಳಿ ಗುಂಪಿನ ಕಡೆಗೆ ಎಸೆದಿದ್ದಾನೆ. ಇದಾದ ಬಳಿಕ ಮತ್ತೊಬ್ಬ ಯುವಕನಿಂದ ಇದೇ ರೀತಿಯ ಇನ್ನೊಂದು ಸಾಧನವನ್ನು ತೆಗೆದುಕೊಂಡಿದ್ದು, ಅದನ್ನು ಎತ್ತಿಕೊಂಡು ಓಡಿಹೋಗಿದ್ದು, ಮಮ್ದಾನಿ ನಿವಾಸದ ಹೊರಗೆ ಎಸೆದಿದ್ದಾನೆ ಎಂದು ನ್ಯೂಯಾರ್ಕ್ ಪೊಲೀಸ್ ಇಲಾಖೆ ತಿಳಿಸಿರುವುದಾಗಿ ವರದಿಯಾಗಿದೆ.

## ಯುದ್ಧ ಗೆದ್ದಿದ್ದೇವೆ, ಇಂಗ್ಲೆಂಡ್ ಸಹಕಾರ ಬೇಡ

**ವಾಷಿಂಗ್ಟನ್:** ನಾವು ಈಗಾಗಲೇ ಗೆದ್ದ ನಂತರ ಯುದ್ಧದಲ್ಲಿ ಕೈಜೋಡಿಸಲು ಇಂಗ್ಲೆಂಡ್ ಪ್ರಧಾನಿ ಕೀರ್ ಸ್ಟಾರ್ಮರ್ ಪ್ರಯತ್ನಿಸುತ್ತಿದ್ದಾರೆ. ಈಗ ಅವರ ಸಹಕಾರ ನಮಗೆ ಅಗತ್ಯವಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಇರಾನ್ ನಡೆಸಿದ ದಾಳಿಯಲ್ಲಿ ಮೃತಪಟ್ಟ ಅಮೆರಿಕ ಸೈನಿಕರಿಗೆ ವಿಮಾನ ನಿಲ್ದಾಣದಲ್ಲಿ ಗೌರವ ಸಲ್ಲಿಸಿದ ಬಳಿಕ ಮಾತನಾಡಿದ ಅವರು ಇರಾನ್ ವಿರುದ್ಧ ನಾವು ಈಗ ಯುದ್ಧ ಗೆದ್ದಿದ್ದೇವೆ, ಆರಂಭದಲ್ಲಿ ಇಲ್ಲದ ಇಂಗ್ಲೆಂಡ್ ಬೆಂಬಲ ಈಗ ಅಗತ್ಯವಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದ್ದಾರೆ. ಇರಾನ್ ವಿರುದ್ದದ ಯುದ್ದಕ್ಕೆ ನೆರವಾಗಲು ಇಂಗ್ಲೆಂಡ್ ಪ್ರಧಾನಿ ಕೀರ್ ಸ್ಟಾರ್ಮರ್ ವಿಮಾನವಾಹಕ ನೌಕೆ ಕಳುಹಿಸುವ ಪ್ರಸ್ತಾಪ ಮಾಡಿದ್ದಾರೆ. ಈಗ ಅದರ ಅಗತ್ಯವಿಲ್ಲ ನಾವು ಈಗಾಗಲೇ ಗೆದ್ದ ನಂತರ ಯುದ್ಧಗಳಿಗೆ ಸೇರುವ ಜನರು ನಮಗೆ ಅಗತ್ಯವಿಲ್ಲ ಎಂದು ಕಿಡಿ ಕಾರಿದ್ದಾರೆ.

ಒಂದು ಕಾಲದಲ್ಲಿ ಮಿತ್ರ ರಾಷ್ಟ್ರವಾಗಿದ್ದ, ಇಂಗ್ಲೆಂಡ್ ಈಗ ಅಮೆರಿಕದ ವಿಷಯದಲ್ಲಿ ಅಂತರ ಕಾಪಾಡಿಕೊಳ್ಳುತ್ತಿದೆ. ಮಧ್ಯಪ್ರಾಚ್ಯಕ್ಕೆ ಎರಡು ವಿಮಾನವಾಹಕ ನೌಕೆಗಳನ್ನು ಕಳುಹಿಸುವ ಬಗ್ಗೆ ಗಂಭೀರ ಚಿಂತನೆ ನಡೆಸುತ್ತಿದೆ ಎಂದ ಇಂಗ್ಲೆಂಡ್ ಪ್ರಧಾನಿ ಹೇಳಿದ್ದಾರೆ. ಯುದ್ದ ಗೆದ್ದ ನಂತರ ಅದರ ಅವಶ್ಯಕತೆ ನಮಗಿಲ್ಲ ಎಂದಿದ್ದಾರೆ.

ಪ್ರಧಾನಿ ಕೀರ್ ಸ್ಟಾರ್ಮರ್ ಅವರ ಸಹಕಾರ ಮತ್ತು ಬೆಂಬಲ ಈಗಿನ ಪರಿಸ್ಥಿತಿಯಲ್ಲಿ ನಮಗೆ ಅಗತ್ಯವಿಲ್ಲ. ಯುದ್ದ ಗೆದ್ದ ನಂತರ ಜೊತೆ ಸೇರುವ ಮಂದಿಯನ್ನು ನಾವು ಯಾವುದೇ ಕಾರಣಕ್ಕೂ ನಂಬುವುದಿಲ್ಲ ಮತ್ತು ಅಂತವರು ನಮಗೆ ಬೇಕಾಗಿಯೂ ಇಲ್ಲ ಎಂದು ಹೇಳಿದ್ದಾರೆ.

ಇಂಗ್ಲೆಂಡ್ ಸರ್ಕಾರ ಆಕ್ರಮಣಕಾರಿ ಕಾರ್ಯಾಚರಣೆಗಳಿಗೆ ಸೇರಿಲ್ಲ ಅಥವಾ ಹಾಗೆ ಮಾಡಲು ಯಾವುದೇ ಬದ್ಧತೆಯನ್ನು ನೀಡಿಲ್ಲ. ಈ ಹಿಂದೆ, ಒಂದು ವಿಮಾನವಾಹಕ ನೌಕೆ ಪ್ರದೇಶಕ್ಕೆ ನಿಯೋಜಿಸಬೇಕಾದ ಅಗತ್ಯವಿದ್ದರೆ ಅದನ್ನು ಮುಂದುವರಿದ ಸ್ಥಿತಿಯಲ್ಲಿ ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



**ಇಂಗ್ಲೆಂಡ್ ಬೆಂಬಲ ಅಗತ್ಯವಿಲ್ಲ**

## ನಿಮ್ಮ ಕೆಲಸ ನೋಡ್ಕೊಳ್ಳಿ : ಟ್ರಂಪ್ ವಿರುದ್ಧ ಹರಿಹಾಯ್ದ ಕಮಲ್



**ಚೆನ್ನೈ:** ನಾವು ರಷ್ಯಾದಿಂದ ತೈಲ ಖರೀದಿಸಲು ಅಮೆರಿಕದಿಂದ ಅನುಮತಿ ಪಡೆಯುವ ಅವಶ್ಯಕತೆ ಏನಿದೆ ಎಂದು ಖ್ಯಾತ ಚಿತ್ರನಟ ಹಾಗೂ ರಾಜ್ಯ ಸಭಾ ಸದಸ್ಯ ಕಮಲ್ ಹಾಸನ್ ಪ್ರಶ್ನಿಸಿದ್ದಾರೆ. ಭಾರತ ರಷ್ಯಾದ ತೈಲವನ್ನು ಖರೀದಿಸಲು ಅಮೆರಿಕ ಅನುಮತಿ ನೀಡಿದೆ ಎಂದು ಉನ್ನತ ಅಧಿಕಾರಿಯೊಬ್ಬರು ಹೇಳಿದ ನಂತರ ಅಮೆರಿಕವನ್ನು ಟೀಕಿಸಿರುವ ಕಮಲ್ ಹಾಸನ್ ಅವರು, ಭಾರತವು ಇತರ ದೇಶಗಳಿಂದ ಆದೇಶಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ರಾಜ್ಯಸಭಾ ಸಂಸದ ಮತ್ತು ಮಕ್ಕಳ್ ನೀಧಿ ಮೈಯಂ ನಾಯಕ ಅಮೆರಿಕ ಅಧ್ಯಕ್ಷರನ್ನು ಉದ್ದೇಶಿಸಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅಮೆರಿಕದ ಅಧ್ಯಕ್ಷರೇ, ನಾವು, ಭಾರತದ ಜನರು, ಮುಕ್ತ ಮತ್ತು ಸಾರ್ವಭೌಮ ರಾಷ್ಟ್ರಕ್ಕೆ ಸೇರಿದವರು. ನಾವು ಇನ್ನು ಮುಂದೆ ದೂರದ ವಿದೇಶಿ ತೀರಗಳಿಂದ ಆದೇಶಗಳನ್ನು ತೆಗೆದುಕೊಳ್ಳುವುದಿಲ್ಲ. ದಯವಿಟ್ಟು ನಿಮ್ಮ ಸ್ವಂತ ವ್ಯವಹಾರವನ್ನು ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನೋಡಿಕೊಳ್ಳಿ ಎಂದು ಅವರು ಬರೆದುಕೊಂಡಿದ್ದಾರೆ.

ಸಾರ್ವಭೌಮ ರಾಷ್ಟ್ರಗಳ ನಡುವಿನ ಪರಸ್ಪರ ಗೌರವವು ಶಾಶ್ವತ ಜಾಗತಿಕ ಶಾಂತಿಯ ಏಕೈಕ ಅಡಿಪಾಯವಾಗಿದೆ. ನಿಮ್ಮ ದೇಶ ಮತ್ತು ಅದರ ಜನರಿಗೆ ಶಾಂತಿ ಮತ್ತು ಸಮೃದ್ಧಿಯನ್ನು ನಾವು ಬಯಸುತ್ತೇವೆ ಎಂದು ಹಾಸನ್ ಹೇಳಿದರು. ಅಮೆರಿಕದ ಖಜಾನೆ ಕಾರ್ಯದರ್ಶಿ ಮತ್ತು ಟ್ರಂಪ್ ಅವರ ಸಹಾಯಕ ಸ್ಕಾಟ್ ಬೆಸೆಂಟ್, ಅಮೆರಿಕವು ಭಾರತಕ್ಕೆ ರಷ್ಯಾದ ತೈಲವನ್ನು ಖರೀದಿಸಲು ಅನುಮತಿ ನೀಡಿದೆ ಎಂದು ಹೇಳಿದ್ದರು.

ಅಮೆರಿಕದ ಅಧಿಕಾರಿಯ ಅನುಮತಿ ಹೇಳಿಕೆಯ ನಂತರ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಭಾರತದ ವಿದೇಶಾಂಗ ನೀತಿಯು ನಮ್ಮ ಜನರ ಸಾಮೂಹಿಕ ಇಚ್ಛಾಶಕ್ತಿಯಿಂದ ಹೊರಹೊಮ್ಮುತ್ತದೆ. ಅದು ನಮ್ಮ ಇತಿಹಾಸ, ನಮ್ಮ ಭೌಗೋಳಿಕತೆ ಮತ್ತು ಸತ್ಯ ಮತ್ತು ಅಹಿಂಸೆಯನ್ನು ಆಧರಿಸಿದ ನಮ್ಮ ಆಧ್ಯಾತ್ಮಿಕ ನೀತಿಯಲ್ಲಿ ಬೇರೂರಿರಬೇಕು. ನಾವು ನೋಡುತ್ತಿರುವುದು ನೀತಿಯಲ್ಲ. ಇದು ರಾಜಿ ಮಾಡಿಕೊಂಡ ವ್ಯಕ್ತಿಯ ಶೋಷಣೆಯ ಪರಿಣಾಮವಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

## ಇರಾನ್ ಇಂಧನ ಸಂಗ್ರಹಗಾರಗಳ ಅಮೆರಿಕ-ಇಸ್ರೇಲ್ ಮೇಲೆ ದಾಳಿ

**ಟೆಹ್ರಾನ್:** ಇರಾನ್‌ನ ಇಂಧನ ಸಂಗ್ರಹಣಾ ಸೌಲಭ್ಯಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ನಡೆಸಿವೆ. ದಕ್ಷಿಣ ಟೆಹ್ರಾನ್‌ನಲ್ಲಿರುವ ತೈಲ ಸಂಗ್ರಹಣಾ ವ್ಯವಸ್ಥೆ ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ. ಆದರೆ, ಹತ್ತಿರದ ಸಂಸ್ಕರಣಾಗಾರಕ್ಕೆ ಯಾವುದೇ ಹಾನಿಯಾಗಿಲ್ಲ. ಈ ದಾಳಿಗಳು ನಗರದಾದ್ಯಂತ ಬೆಂಕಿ ಮತ್ತು ಹೊಗೆಯನ್ನು ಹರಡಿಸಿದೆ. ಅಲ್ಬೋರ್ಜ್ ಪ್ರಾಂತ್ಯದ ಕರಾಜ್ ನಗರದಲ್ಲಿಯೂ ಸ್ಫೋಟಗಳ ಶಬ್ದ ಕೇಳಿಬಂದಿದೆ. ದಾಳಿಯನ್ನು ಇಸ್ರೇಲ್ ಸೇನೆ ಖಚಿತಪಡಿಸಿದೆ. ಇರಾನ್ ಇನ್ಮುಂದೆ ಮಧ್ಯಪ್ರಾಚ್ಯದ ಬೆದರಿಸುವ ರಾಷ್ಟ್ರವಲ್ಲ. ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ನಂತರ ಸಂಪೂರ್ಣ ಸೋತ ದೇಶವಾಗಿದೆ.

ಮಧ್ಯಪ್ರಾಚ್ಯದಲ್ಲಿ ಯುದ್ಧವು ಎರಡನೇ ವಾರಕ್ಕೆ ಕಾಲಿಟ್ಟಿರುವುದರಿಂದ ಇರಾನ್ ತುಂಬಾ ಹೊಡೆತ ಪಡೆಯಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಇರಾನ್ ಮಧ್ಯಪ್ರಾಚ್ಯದಲ್ಲಿರುವ ತನ್ನ ನೆರೆಹೊರೆಯವರಿಗೆ ಕ್ಷಮೆಯಾಚಿಸಿದೆ, ಶರಣಾಗತಿ ನೀಡಿದೆ. ಇನ್ಮುಂದೆ ಅದು ಅವರನ್ನು ಹೊಡೆಯುವುದಿಲ್ಲ ಎಂದು ಭರವಸೆ ನೀಡಿದೆ.

ಅಮೆರಿಕ ಮತ್ತು ಇಸ್ರೇಲ್‌ನ ನಿರಂತರ ದಾಳಿಯಿಂದಾಗಿ ಇರಾನ್ ಈ ಭರವಸೆಯನ್ನು ನೀಡಬೇಕಾಯಿತು. ಇರಾನ್ ಮಧ್ಯಪ್ರಾಚ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಆಳಲು ನೋಡುತ್ತಿದೆ. ಆದರೆ, ಸಾವಿರಾರು ವರ್ಷಗಳಲ್ಲಿ ಸುತ್ತಮುತ್ತಲಿನ ಮಧ್ಯಪ್ರಾಚ್ಯ ದೇಶಗಳಿಗೆ ಇರಾನ್ ಮೊದಲ ಬಾರಿಗೆ ಸೋತಿದೆ. ಇದಕ್ಕಾಗಿ ಮಧ್ಯಪ್ರಾಚ್ಯ ದೇಶಗಳು ನನಗೆ ಧನ್ಯವಾದ ತಿಳಿಸಿವೆ ಎಂದು ಟ್ರಂಪ್ ತಿಳಿಸಿದ್ದಾರೆ.



## ರಾಷ್ಟ್ರಪತಿಗೆ ಅಗೌರವ : ಮಮತಾ ಸರ್ಕಾರದಿಂದ ವರದಿ ಕೇಳಿದ ಕೇಂದ್ರ

**ನವದೆಹಲಿ:** ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಾರ್ಯಕ್ರಮದಲ್ಲಿ ಲೋಪಗಳು ನಡೆದಿರುವ ಬಗ್ಗೆ ಗದ್ದಲದ ನಡುವೆ, ಶಿಷ್ಟಾಚಾರ, ಸ್ಥಳ ಮತ್ತು ಮಾರ್ಗ ವ್ಯವಸ್ಥೆಗಳಿಗೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆ ಕುರಿತು ಕೇಂದ್ರವು ಸಂಜೆ 5 ಗಂಟೆಯೊಳಗೆ ರಾಜ್ಯ ಸರ್ಕಾರದಿಂದ ಪ್ರತಿಕ್ರಿಯೆಯನ್ನು ಕೋರಿದೆ ಎಂದು ಮೂಲಗಳು ತಿಳಿಸಿವೆ. ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ, ಕೇಂದ್ರ ಗೃಹ ಕಾರ್ಯದರ್ಶಿ ಅವರು ಬ್ಲೂ ಬುಕ್ ಶಿಷ್ಟಾಚಾರ, ಸ್ಥಳ ಮತ್ತು ಮಾರ್ಗ ವ್ಯವಸ್ಥೆಗಳ ನಿಯಮಗಳ ಉಲ್ಲಂಘನೆಯ ಕುರಿತು ಪ್ರತಿಕ್ರಿಯೆಯನ್ನು ನೀಡುವಂತೆ ಕೇಳಿದ್ದಾರೆ. ಬ್ಲೂ ಬುಕ್ ಒಂದು ಗೌಪ್ಯ ದಾಖಲೆಯಾಗಿದ್ದು, ಇದು ರಾಷ್ಟ್ರಪತಿ, ಉಪರಾಷ್ಟ್ರಪತಿ ಮತ್ತು ಪ್ರಧಾನಿ ಮತ್ತು ಅವರ ಕುಟುಂಬಗಳಿಗೆ ಭದ್ರತೆ ಮತ್ತು ಶಿಷ್ಟಾಚಾರದ ನಿಯಮಗಳನ್ನು ಪಟ್ಟಿ ಮಾಡುತ್ತದೆ.ಬಾಗ್ಡೋಗ್ರಾ ವಿಮಾನ ನಿಲ್ದಾಣದ ಬಳಿ ಬುಡಕಟ್ಟು ಸಮುದಾಯದ ಕಾರ್ಯಕ್ರಮದಲ್ಲಿ ಕಡಿಮೆ ಜನಸಂದಣಿ ಇದ್ದ ಬಗ್ಗೆ ಮುರ್ಮು ಅವರು ಬೇಸರ ವ್ಯಕ್ತಪಡಿಸಿದ್ದಾರೆ ಮತ್ತು ಬಿಧಾನ್‌ನಗರದಿಂದ ಸ್ಥಳವನ್ನು ಬದಲಾಯಿಸುವ ನಿರ್ಧಾರವನ್ನು ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಅವರ ಮಂತ್ರಿಗಳು ತಮ್ಮ ಭೇಟಿಯ ಸಮಯದಲ್ಲಿ ಗೈರುಹಾಜರಿಯನ್ನು ಅವರು ಗಮನಿಸಿದ್ದಾರೆ.ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಗೆ ಕಳುಹಿಸಲಾದ ಪತ್ರದಲ್ಲಿ, ರಾಷ್ಟ್ರಪತಿಗಳು ರಾಜ್ಯಕ್ಕೆ ಆಗಮಿಸಿದಾಗ ಅವರನ್ನು ಸ್ವಾಗತಿಸಲು ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಮತ್ತು ಡಿಜಿಪಿ ಗೈರುಹಾಜರಾಗಿರುವುದು ಬ್ಲೂ ಬುಕ್ ನಿಯಮಗಳ ಗಂಭೀರ ಉಲ್ಲಂಘನೆಯಾಗಿದೆ ಎಂದು ಪ್ರತಿಕ್ರಿಯೆ ಕೋರಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಸಿಲಿಗುರಿ ಮೇಯರ್ ಮಾತ್ರ ಅವರನ್ನು ಸ್ವಾಗತಿಸಲು ಹಾಜರಿರುವುದು ಶಿಷ್ಟಾಚಾರದ ಉಲ್ಲಂಘನೆಯಾಗಿದೆ ಎಂದು ಕೇಂದ್ರ ಸರ್ಕಾರ ಗಮನಿಸಿದೆ ಎಂದು ಅವರು ಹೇಳಿದರು. ಮೂಲಗಳ ಪ್ರಕಾರ, ರಾಷ್ಟ್ರಪತಿಗಳಿಗಾಗಿ ಸ್ಥಾಪಿಸಲಾದ ಶೌಚಾಲಯದಲ್ಲಿ ನೀರು ಇರಲಿಲ್ಲ, ಇದಕ್ಕಾಗಿ ರಾಜ್ಯ ಸರ್ಕಾರದಿಂದ ವಿವರಣೆಯನ್ನು ಕೋರಲಾಗಿದೆ.ರಾಷ್ಟ್ರಪತಿಗಳನ್ನು ಕರೆದೊಯ್ಯಲು ಆಡಳಿತವು ಆಯ್ಕೆ ಮಾಡಿದ ಮಾರ್ಗವು ಕಸದಿಂದ ತುಂಬಿರುವುದಕ್ಕೆ ಕಾರಣವನ್ನು ವಿವರಿಸಲು ರಾಜ್ಯವನ್ನು ಕೇಳಲಾಗಿದೆ ಎಂದು ಅವರು ಹೇಳಿದರು. ಡಾರ್ಜಿಲಿಂಗ್ ಜಿಲ್ಲಾ ಮ್ಯಾಜಿಸ್ಟ್ರೇಟ್, ಸಿಲಿಗುರಿ ಪೊಲೀಸ್ ಆಯುಕ್ತ ಮತ್ತು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ವಿರುದ್ಧ ತೆಗೆದುಕೊಂಡ ಕ್ರಮದ ಬಗ್ಗೆ ತಿಳಿಯಲು ಪತ್ರವು ಕೋರಿದೆ.ಸಿಲಿಗುರಿಯ ಬಿಧಾನ್ನಗರದಲ್ಲಿ ಮೂಲತಃ ನಡೆಯಬೇಕಿದ್ದ ಬುಡಕಟ್ಟು ಸಮುದಾಯದ ವಾರ್ಷಿಕ ಕಾರ್ಯಕ್ರಮಕ್ಕೆ ಮುರ್ಮು ಅವರನ್ನು ಆಹ್ವಾನಿಸಲಾಗಿತ್ತು.ಆದಾಗ್ಯೂ, ಭದ್ರತೆ ಮತ್ತು ಇತರ ವ್ಯವಸ್ಥಾಪನಾ ಕಾರಣಗಳನ್ನು ಉಲ್ಲೇಖಿಸಿ, ಅಧಿಕಾರಿಗಳು ಸ್ಥಳವನ್ನು ಬಾಗ್ಡೋಗ್ರ ವಿಮಾನ ನಿಲ್ದಾಣದ ಬಳಿಯ ಗೋಶೈಪುರಕ್ಕೆ ಸ್ಥಳಾಂತರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮಿನಿ ನ್ಯೂಸ್

### 90 ವರ್ಷದ ಮುದುಕಿ ಮೇಲೆ ಮುಸುಕುಧಾರಿಗಳಿಂದ ಸಾಮೂಹಿಕ ಅತ್ಯಾಚಾರ

**ಖಾಂಡ್ವಾ:** ಬರೊಬ್ಬರಿ 90 ವರ್ಷದ ಹಣ್ಣು ಹಣ್ಣು ಮುದುಕಿ ಮೇಲೆ ನಾಲ್ವರು ಮುಸುಕುಧಾರಿಗಳು ಸಾಮೂಹಿಕ ಅತ್ಯಾಚಾರವೆಸಗಿರುವ ಘಟನೆ ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯಲ್ಲಿ ನಡೆದಿದೆ. ಈ ಬಗ್ಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ಆರಂಭಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಲೈಂಗಿಕ ದೌರ್ಜನ್ಯದ ಸಮಯದಲ್ಲಿ ಗಾಯಗೊಂಡಿರುವ ಮಹಿಳೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆಕೆ ಅಪಾಯದಿಂದ ಪಾರಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಜಿಲ್ಲಾ ಕೇಂದ್ರದಿಂದ ಸುಮಾರು 55 ಕಿ.ಮೀ ದೂರದಲ್ಲಿರುವ ತನ್ನ ಹಳ್ಳಿಯ ಕೃಷಿ ಹೊಲದಲ್ಲಿ ವೃದ್ಧೆ ಒಬ್ಬಂಟಿಯಾಗಿದ್ದಾಗ, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎಂದು ಆರೋಪಿಸಲಾಗಿದೆ. ಸಂತ್ರಸ್ತ ಮಹಿಳೆ ಮರುದಿನ ಬೆಳಗ್ಗೆ ಬೇರೆ ಹಳ್ಳಿಯಲ್ಲಿ ವಾಸಿಸುವ ತನ್ನ ಮಗಳಿಗೆ ಘಟನೆಯ ಬಗ್ಗೆ ತಿಳಿಸಿದ್ದಾರೆ. ನಂತರ ಅವರು ಮಹಿಳೆಯನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದಿದ್ದಾರೆ.ಆಸ್ಪತ್ರೆ ಸಿಬ್ಬಂದಿ ಮಹಿಳೆ ಮತ್ತು ಅವರ ಮಗಳಿಗೆ ಪೊಲೀಸರನ್ನು ಸಂಪರ್ಕಿಸಲು ಸಲಹೆ ನೀಡಿದ್ದಾರೆ ಎಂದು ಖಾಂಡ್ವಾ ಪೊಲೀಸ್ ವರಿಷ್ಠಾಧಿಕಾರಿ ಮನೋಜ್ ರೈ ತಿಳಿಸಿದ್ದಾರೆ.

### ವೀರ ಸಾವರ್ಕರ್ ಸರ್ವಶ್ರೇಷ್ಠ ದೇಶಭಕ್ತ

**ನಾಗ್ಪುರ:** ವಿನಾಯಕ ದಾಮೋದರ್ ಸಾವರ್ಕರ್ ಅವರು ವೈಜ್ಞಾನಿಕ ಸೈದ್ಧಾಂತಿಕ ದೃಷ್ಟಿಕೋನ ಹೊಂದಿರುವ ಕಟ್ಟಾ ದೇಶಭಕ್ತರಾಗಿದ್ದರು ಮತ್ತು ಹಿಂದುತ್ವದ ಬಗ್ಗೆ ಅವರ ವಿವರಣೆ ಇನ್ನೂ ಪ್ರಸ್ತುತ ಮತ್ತು ಉಪಯುಕ್ತವಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತಾ, ಸಾವರ್ಕರ್ ಅವರನ್ನು ಟೀಕಿಸುತ್ತಿದ್ದ ದೊಡ್ಡ ರಾಜಕೀಯ ನಾಯಕರೊಬ್ಬರಿಗೆ, ದಂತಕಥೆಯ ಸ್ವಾತಂತ್ರ್ಯ ಹೋರಾಟಗಾರ ಶ್ರೇಷ್ಠರಲ್ಲದಿದ್ದರೆ, ದೇಶದಲ್ಲಿ ಯಾರೂ ಶ್ರೇಷ್ಠರಲ್ಲ ಎಂದು ನಾನು ಒಮ್ಮೆ ಹೇಳಿದ್ದೆ ಎಂದು ಗಡ್ಕರಿ ಹೇಳಿದರು.

ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ (ನಿವೃತ್ತ) ಅವರನ್ನು ಸನ್ಮಾನಿಸಲಾದ ಸ್ವಾತಂತ್ರ್ಯ ವೀರ ಸಾವರ್ಕರ್ ಸ್ಮಾರಕ ಸಮಿತಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಗಡ್ಕರಿ, ಸಾವರ್ಕರ್ ಎಲ್ಲರಿಗೂ ಸ್ಫೂರ್ತಿಯ ಮೂಲ ಎಂದು ಹೇಳಿದರು. ಅವರು ಕಟ್ಟಾ ದೇಶಭಕ್ತರು ಮಾತ್ರವಲ್ಲ, ಅತ್ಯುತ್ತಮ ಕವಿ, ತತ್ವಜ್ಞಾನಿ ಮತ್ತು ಇತಿಹಾಸಕಾರರಾಗಿದ್ದರು. ಆದರೆ, ಮುಖ್ಯವಾಗಿ, ಅವರು ಆದರ್ಶ ಸಮಾಜ ಸುಧಾರಕರಾಗಿದ್ದರು. ಸಾವರ್ಕರ್ ಅವರ ಸೈದ್ಧಾಂತಿಕ ದೃಷ್ಟಿಕೋನವು ವೈಜ್ಞಾನಿಕವಾಗಿತ್ತು. ಹಿಂದುತ್ವದ ಬಗ್ಗೆ ಅವರು ನೀಡಿದ ವಿವರಣೆಯು ಪ್ರಸ್ತುತ ಕಾಲದಲ್ಲಿ ಇನ್ನೂ ಬಹಳ ಉಪಯುಕ್ತ ಮತ್ತು ಪ್ರಸ್ತುತವಾಗಿದೆ ಎಂದು ಹಿರಿಯ ಬಿಜೆಪಿ ನಾಯಕ ಹೇಳಿದರು.

### ಯುದ್ಧಪೀಡಿತ ಮಧ್ಯಪ್ರಾಚ್ಯದಿಂದ 52 ಸಾವಿರ ಭಾರತೀಯರು ಸುರಕ್ಷಿತವಾಗಿ ವಾಪಸ್

**ನವದೆಹಲಿ:** ಅಮೆರಿಕ ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಹಿನ್ನೆಲೆಯಲ್ಲಿ ಮಧ್ಯಪ್ರಾಚ್ಯ ಪ್ರದೇಶದಲ್ಲಿ ಸಿಲುಕಿಕೊಂಡಿದ್ದ 52 ಸಾವಿರ ಭಾರತೀಯರು ತಾಯ್ನಾಡಿಗೆ ಸುರಕ್ಷಿತವಾಗಿ ವಾಪಸ್ ಆಗಿದ್ದಾರೆಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಮಾ.1 ರಿಂದ 7 ರ ಅವಧಿಯಲ್ಲಿ ವಿವಿಧ ವಿಮಾನಗಳಲ್ಲಿ ಭಾರತೀಯರು ಸುರಕ್ಷಿತವಾಗಿ ಹಿಂದಿರುಗಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಮಂದಿ ಹಿಂದಿರುಗಲಿದ್ದಾರೆಂದು ಅದು ಹೇಳಿದೆ. ಇರಾನ್ ಮೇಲೆ ಕಳೆದ ತಿಂಗಳು ಅಮೆರಿಕ ಮತ್ತು ಇಸ್ರೇಲ್ ದಾಳಿ ಆರಂಭಿಸಿದ ಬಳಿಕ ಪಶ್ಚಿಮ ಏಷ್ಯಾ ದೇಶಗಳಲ್ಲಿ ನೆಲೆಸಿರುವ 1 ಕೋಟಿ ಭಾರತೀಯರ ಸುರಕ್ಷತೆ ಬಗ್ಗೆ ಹಾಗೂ ವ್ಯಾಪಾರ ಸರಕುಗಳು ಮತ್ತು ಇಂಧನ ಪೂರೈಕೆ ವ್ಯವಸ್ಥಿತವಾಗಿ ಮುಂದುವರೆಸಲು ಭಾರತ ಒತ್ತು ನೀಡಿದೆ ಎಂದು ಸಚಿವಾಲಯ ಹೇಳಿದೆ. ಕಳೆದ ಕೆಲ ದಿನಗಳಿಂದ ಮಧ್ಯಪ್ರಾಚ್ಯ ಭಾಗದಲ್ಲಿ ವಾಯು ಮಾರ್ಗಗಳನ್ನು ಭಾಗಶಃ ತೆರೆದಿರುವ ಹಿನ್ನೆಲೆಯಲ್ಲಿ ಭಾರತ ವಿದೇಶಿ ವಿಮಾನಯಾನ ಸಂಸ್ಥೆಗಳು ಕಾರ್ಯಾಚರಣೆ ಆರಂಭಿಸಿವೆ.

### ನೀರಿನ ಟ್ಯಾಂಕಿನಲ್ಲಿ ಮೂವರು ಬಾಲಕಿಯರು ಶವವಾಗಿ ಪತ್ತೆ, ತಂದೆಯೇ ತಳ್ಳಿ ಕೊಂದಿರುವ ಶಂಕೆ

**ಕಾಮರೆಡ್ಡಿ:** ಮೂವರು ಬಾಲಕಿಯರು ನೀರಿನ ಟ್ಯಾಂಕಿನಲ್ಲಿ ಶವವಾಗಿ ಪತ್ತೆಯಾಗಿರುವ ಘಟನೆ ತೆಲಂಗಾಣದ ಕಾಮರೆಡ್ಡಿಯಲ್ಲಿ ನಡೆದಿದೆ. ತಂದೆಯೇ ಅವರನ್ನು ನೀರಿಗೆ ತಳ್ಳಿರಬಹುದು ಎಂದು ಅನುಮಾನಿಸಲಾಗಿದೆ. ಬಾಲಕಿಯರು ಬೆಳಗ್ಗೆ ಆತನೊಂದಿಗೆ ಹೊರಗೆ ಹೋಗಿದ್ದರು ಮತ್ತು ಮನೆಗೆ ಹಿಂತಿರುಗಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರು 8, 7 ಮತ್ತು 5 ವರ್ಷ ವಯಸ್ಸಿನವರಾಗಿದ್ದು, ಕಾಮರೆಡ್ಡಿ ನಿವಾಸಿಗಳಾಗಿದ್ದರು.

ಪ್ರಾಥಮಿಕ ತನಿಖೆಯ ಪ್ರಕಾರ, ಮಕ್ಕಳು ತಮ್ಮ ತಂದೆಯೊಂದಿಗೆ ಹತ್ತಿರದ ದಿನಸಿ ಅಂಗಡಿಯಿಂದ ತಿಂಡಿ ಖರೀದಿಸಲು ಹೋಗಿದ್ದರು. ಅವರು ಹಲವಾರು ಗಂಟೆಗಳ ಕಾಲ ಹಿಂತಿರುಗದಿದ್ದಾಗ, ಕುಟುಂಬ ಸದಸ್ಯರು ಅವರನ್ನು ಹುಡುಕಲು ಪ್ರಾರಂಭಿಸಿದರು. ಮಕ್ಕಳು ಪತ್ತೆಯಾಗದ ನಂತರ, ಪೊಲೀಸರು ನಾಪತ್ತೆ ಪ್ರಕರಣವನ್ನು ದಾಖಲಿಸಿಕೊಂಡು ಶೋಧ ಕಾರ್ಯಾಚರಣೆಯನ್ನು ಆರಂಭಿಸಿದರು, ಅವರನ್ನು ಪತ್ತೆಹಚ್ಚಲು ಮೂರು ವಿಶೇಷ ತಂಡಗಳನ್ನು ರಚಿಸಿದರು. ತನಿಖೆಯ ಸಮಯದಲ್ಲಿ, ತಂದೆಯ ಮೇಲೆ ಅನುಮಾನ ಬಿತ್ತು. ಮಕ್ಕಳನ್ನು ನೀರಿನ ಟ್ಯಾಂಕ್‌ಗೆ ತಳ್ಳಿದವನು ಅವನೇ ಎಂದು ಶಂಕಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಮಧ್ಯಪ್ರಾಚ್ಯದಲ್ಲಿ ಯುದ್ಧ: ಭಾರತದಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ಏರುಪೇರು

## ವಿಶ್ಲೇಷಕರ ಪ್ರಕಾರ, ದೀರ್ಘಕಾಲದ ಸಂಘರ್ಷವು ಜಾಗತಿಕ ಆರ್ಥಿಕತೆಗೆ ಗಮನಾರ್ಹ ಹಾನಿಯನ್ನುಂಟುಮಾಡಬಹುದು



**ಕೊಚ್ಚಿ:** ಭಾರತದಲ್ಲಿ ಪ್ರಸ್ತುತ ಸಾಕಷ್ಟು ರಸಗೊಬ್ಬರಗಳ ಲಭ್ಯತೆ ಇದೆ, ಆದರೆ ಪಶ್ಚಿಮ ಏಷ್ಯಾದಲ್ಲಿ ದೀರ್ಘಕಾಲದ ಸಂಘರ್ಷವು ಸಮಸ್ಯೆಗಳನ್ನು ಉಂಟುಮಾಡಬಹುದು ಎಂದು ದಕ್ಷಿಣ ಭಾರತದ ರಾಜ್ಯಗಳಿಗೆ ಅತಿದೊಡ್ಡ ಪೂರೈಕೆದಾರರಾದ ರಸಗೊಬ್ಬರ ಮತ್ತು ರಾಸಾಯನಿಕಗಳ ತಿರುವಾಂಕೂರು ಲಿಮಿಟೆಡ್ (ಎಫ್‌ಎಸಿಟಿ) ನ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಾರ್ವಜನಿಕ ವಲಯದ ಕಂಪನಿಯಾದ ಎಫ್‌ಎಸಿಟಿ, ಪಶ್ಚಿಮ ಏಷ್ಯಾ ಮತ್ತು ಮಧ್ಯಪ್ರಾಚ್ಯದ ಹಲವಾರು ದೇಶಗಳಿಂದ ರಫ್ತು ಮಾಡಲಾದ ರಾಕ್ ಫಾಸ್ಫೇಟ್ ಮತ್ತು ಫಾಸ್ಪರಿಕ್ ಆಮ್ಲದಂತಹ ಕಚ್ಚಾ ವಸ್ತುಗಳನ್ನು ಅವಲಂಬಿಸಿದೆ ಮತ್ತು ಅವುಗಳನ್ನು ಸಮುದ್ರ ಮಾರ್ಗದ ಮೂಲಕ ತರಲಾಗುತ್ತದೆ. ವಿಶ್ಲೇಷಕರ ಪ್ರಕಾರ, ದೀರ್ಘಕಾಲದ ಸಂಘರ್ಷವು ಜಾಗತಿಕ ಆರ್ಥಿಕತೆಗೆ ಗಮನಾರ್ಹ ಹಾನಿಯನ್ನುಂಟುಮಾಡಬಹುದು. ಪ್ರಸ್ತುತ, ಭಾರತದಲ್ಲಿ ಸುಗ್ಗಿಯ ಕಾಲವಿಲ್ಲ. ಇದು ಜುಲೈ ನಂತರ ಪ್ರಾರಂಭವಾಗುತ್ತದೆ ಎಂದು ಕೊಚ್ಚಿ ಪ್ರಧಾನ ಕಚೇರಿಯ ಎಫ್‌ಎಸಿಟಿಯ ವ್ಯವಸ್ಥಾಪಕ ನಿರ್ದೇಶಕ ಎಸ್. ಶಕ್ತಿಮಣಿ ಪಿಟಿಐಗೆ ಪ್ರಸ್ತುತ ಜಾಗತಿಕ ಪರಿಸ್ಥಿತಿಯು ದೇಶದಲ್ಲಿ ರಸಗೊಬ್ಬರ ಉತ್ಪಾದನೆಯ ಮೇಲೆ ಬೀರುವ ಸಂಭಾವ್ಯ ಪರಿಣಾಮದ ಬಗ್ಗೆ ಕೇಳಿದಾಗ ಹೇಳಿದರು.

ಆದರೆ, ಮುಂದಿನ ಆರು ತಿಂಗಳು ಇದೇ ಪರಿಸ್ಥಿತಿ ಮುಂದುವರಿದರೆ, ಸಮಸ್ಯೆಗಳು ಉದ್ಭವಿಸಬಹುದು. ಇದು ಮುಂದಿನ ಬೆಳೆ ಋತುವಿನಲ್ಲಿ, ಅಂದರೆ ರಬಿ ಋತುವಿನಲ್ಲಿ ಸಮಸ್ಯೆಗಳನ್ನು ಉಂಟುಮಾಡಬಹುದು ಮತ್ತು ಅದನ್ನು ಪರಿಹರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು. ಭಾರತದಲ್ಲಿ ಎರಡು ಪ್ರಮುಖ ಬೆಳೆ ಋತುಗಳಿವೆ ಖಾರಿಫ್ ಮತ್ತು ರಬಿ. ಜೂನ್ -ಜುಲೈನಲ್ಲಿ ಮಾನ್ಸೂನ್ ಆರಂಭದೊಂದಿಗೆ ಖಾರಿಫ್ ಬೆಳೆಗಳನ್ನು ಬಿತ್ತಲಾಗುತ್ತದೆ ಮತ್ತು ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಕೊಯ್ಲು ಮಾಡಲಾಗುತ್ತದೆ, ಆದರೆ ರಬಿ ಬೆಳೆಗಳನ್ನು ಅಕ್ಟೋಬರ್ -ನವೆಂಬರ್‌ನಲ್ಲಿ ನಾಟಿ ಮಾಡಲಾಗುತ್ತದೆ ಮತ್ತು ಏಪ್ರಿಲ್-ಮೇ ವೇಳೆಗೆ ಕೊಯ್ಲು ಮಾಡಲಾಗುತ್ತದೆ. ಎರಡೂ ಋತುಗಳಲ್ಲಿ ಇಳುವರಿಯನ್ನು ಹೆಚ್ಚಿಸಲು ಯೂರಿಯಾವನ್ನು ದೇಶಾದ್ಯಂತ ವ್ಯಾಪಕವಾಗಿ ಬಳಸಲಾಗುತ್ತದೆ. ಫ್ಯಾಕ್ಟ್ ನಂತಹ ಕಂಪನಿಗಳು ಮಧ್ಯಪ್ರಾಚ್ಯದಿಂದ ಮಾತ್ರವಲ್ಲದೆ ಆಸ್ಟ್ರೇಲಿಯಾದಿಂದಲೂ ಅನಿಲವನ್ನು ಪಡೆಯುತ್ತವೆ ಎಂದು ಶಕ್ತಿಮಣಿ ಹೇಳಿದರು.

ಆ ಪ್ರದೇಶದಲ್ಲಿ ಅನಿಲ ಮಾರ್ಗದಲ್ಲಿ ಈಗ ಯಾವುದೇ ಸಮಸ್ಯೆಗಳಿಲ್ಲ. ಕೆಲವು ಸ್ಥಳಗಳಲ್ಲಿ ಅಸ್ಥಿರತೆ ಇದೆ, ಆದರೆ ಅದು ರಸಗೊಬ್ಬರ ವಲಯಕ್ಕೆ ಸಮಸ್ಯೆಯಲ್ಲ ಎಂದು ಅವರು ಹೇಳಿದರು.ಕೇಂದ್ರ ಸರ್ಕಾರವು (ವಿವಿಧ) ಕಂಪನಿಗಳಿಂದ ಡೈ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಮತ್ತು ಡಬಲ್ ಸೂಪರ್ ಫಾಸ್ಫೇಟ್ (ಡಿಎಸ್‌ಪಿ) ದಾಸ್ತಾನುಗಳನ್ನು ಸಂಗ್ರಹಿಸಿದೆ ಮತ್ತು ಇದು ಯಾವುದೇ ಸಮಸ್ಯೆಗಳನ್ನು ಉಂಟುಮಾಡುವುದಿಲ್ಲ ಎಂದು ಅಧಿಕಾರಿ ಗಮನಸೆಳೆದರು. ರೈತರ ಪ್ರತಿಯೊಂದು ರಸಗೊಬ್ಬರ ಅಗತ್ಯವನ್ನು ಪೂರೈಸುವುದನ್ನು ಫ್ಯಾಕ್ಟ್ ಖಚಿತಪಡಿಸುತ್ತದೆ ಎಂದು ಅವರು ಹೇಳಿದರು.ನಾವು ಪೂರೈಸುತ್ತೇವೆ. ಅದು ನಮ್ಮ ಕರ್ತವ್ಯ ಮತ್ತು ನಾವು ಅದನ್ನು ಮಾಡುತ್ತೇವೆ ಎಂದು ಅಧಿಕಾರಿ ಹೇಳಿದರು.ಕೃಷಿ ಮತ್ತು ಸಂಬಂಧಿತ ವಲಯಗಳು ಭಾರತದ ಅತಿದೊಡ್ಡ ಆದಾಯದ ಮೂಲಗಳಲ್ಲಿ ಒಂದಾಗಿದ್ದು, ರಸಗೊಬ್ಬರ ಉದ್ಯಮದ ಮೇಲೆ ಹೆಚ್ಚು ಅವಲಂಬಿತವಾಗಿವೆ. ಜಾಗತಿಕ ಪರಿಸ್ಥಿತಿಯನ್ನು ಉಲ್ಲೇಖಿಸುತ್ತಾ, ಶಕ್ತಿಮಣಿ, ಇದು ತಾತ್ಕಾಲಿಕ ಹಂತ. ಭಯಪಡುವ ಅಗತ್ಯವಿಲ್ಲ.

ಸರ್ಕಾರದ ಬೆಂಬಲದೊಂದಿಗೆ, ರೈತರಿಗೆ ಬೇಕಾದುದನ್ನು ಪೂರೈಸುವ ಸ್ಥಿತಿಯಲ್ಲಿರುತ್ತೇವೆ ಎಂದು ಹೇಳಿದರು.ಫ್ಯಾಕ್ಟ್‌ನ ಮತ್ತೊಬ್ಬ ಹಿರಿಯ ಅಧಿಕಾರಿ, ಕಂಪನಿಯು ಪ್ರಸ್ತುತ ಸುಮಾರು 1.4 ಲಕ್ಷ ಮೆಟ್ರಿಕ್ ಟನ್ ಗಳಷ್ಟು ಒಟ್ಟು ರಸಗೊಬ್ಬರ ದಾಸ್ತಾನು ಹೊಂದಿದೆ ಎಂದು ಹೇಳಿದರು. ಮಾರ್ಚ್ ಮತ್ತು ಏಪ್ರಿಲ್ 2026 ರ ನಡುವೆ 1.5 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರಗಳನ್ನು ಉತ್ಪಾದಿಸಲು ಫ್ಯಾಕ್ಟ್ ಪ್ರಸ್ತುತ ಸಾಕಷ್ಟು ಕಚ್ಚಾ ವಸ್ತುಗಳ ನಿಕ್ಷೇಪವನ್ನು ಹೊಂದಿದೆ ಎಂದು ಅವರು ಹೇಳಿದರು.

ಪೂರೈಕೆ ಸರಪಳಿಯಲ್ಲಿ ಯಾವುದೇ ಅಡಚಣೆಗಳು ಉಂಟಾಗದಿದ್ದರೆ, 2026-27ರ ಖಾರಿಫ್ ಋತುವಿನ ಅವಶ್ಯಕತೆಗಳನ್ನು ಪೂರೈಸಲು ಏಪ್ರಿಲ್ 2026 ರ ನಂತರವೂ ನಿರಂತರ ರಸಗೊಬ್ಬರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಶ್ರಮಿಸುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. 2026 ರ ಸೆಪ್ಟೆಂಬರ್ ವೇಳೆಗೆ ಖಾರಿಫ್ ಋತುವಿಗೆ ಸುಮಾರು 5.5 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರಗಳನ್ನು ಮತ್ತು 1 ಲಕ್ಷ ಮೆಟ್ರಿಕ್ ಟನ್‌ಗಳನ್ನು ಆಮದು ಮಾಡಿಕೊಳ್ಳುವ ಗುರಿಯನ್ನು ಹೊಂದಿದೆ ಎಂದು ಅವರು ಹೇಳಿದರು.

**ನಮ್ಮಲ್ಲಿ ಸಾಕಷ್ಟು ಯೂರಿಯಾ ಲಭ್ಯವಿದೆ. ಒಂದು ತಿಂಗಳೊಳಗೆ ವಿಷಯಗಳು ಬಗೆಹರಿಯುತ್ತವೆ ಎಂದು ನಾವು ಭಾವಿಸುತ್ತೇವೆ. ನಮ್ಮ ಖಾರಿಫ್ ಋತುವಿಗೆ ನಮ್ಮಲ್ಲಿ ಸಾಕಷ್ಟು ಯೂರಿಯಾ ಲಭ್ಯವಿದೆ. ನಮಗೆ ಯಾವುದೇ ಸಮಸ್ಯೆಗಳಿಲ್ಲ.**

**-ಉನ್ನತ ಅಧಿಕಾರಿ**

# ಸಿಲಿಕಾನ್ ಸಿಟಿಯಲ್ಲಿ ಜೂ ಎನ್‌ಟಿಆರ್: ತಾರಕ್ ನೋಡೋಕೆ ಮುಗಿಬಿದ್ದ ಜನ, ಪೊಲೀಸರಿಂದ ಲಾಠಿ ಪ್ರಹಾರ!

ಟಾಲಿವುಡ್ ಜೂನಿಯರ್ ಎನ್‌ಟಿಆರ್ ಬೆಂಗಳೂರಿಗೆ ಬಂದು ಹೋಗಿದ್ದಾರೆ. ಬೆಂಗಳೂರಿನ ಮಹದೇವಪುರದಲ್ಲಿ ನಿರ್ಮಾಣವಾಗಿರುವ ಕಿಮ್ಸ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭಕ್ಕೆ ಎನ್‌ಟಿಆರ್ ಅವರನ್ನು ವಿಶೇಷ ಅತಿಥಿಯನ್ನಾಗಿ ಕರೆಸಲಾಗಿತ್ತು. ಆದರೆ ಎನ್‌ಟಿಆರ್ ಬೆಂಗಳೂರಿಗೆ ಆಗಮಿಸುತ್ತಿರುವ ಸುದ್ದಿ ತಿಳಿಯುತ್ತಿದ್ದಂತೆಯೇ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿಗೆ ಆಗಮಿಸಿದ್ದರು. ಪೊಲೀಸರು ಈ ಅಭಿಮಾನಿಗಳ ಚದುರಿಸಲು ಲಾಠಿ ಚಾರ್ಜ್ ಮಾಡಿದ್ದಾರೆ. ತಾರಕ್ ಇದ್ದ ಕಾರು ಕಂಡ ತಕ್ಷಣ ಅಭಿಮಾನಿಗಳು ಟೈಗರ್... ಟೈಗರ್... ಎಂದು ಘೋಷಣೆ ಕೂಗುತ್ತಾ ಸ್ವಾಗತಿಸಿದರು. ಆಸ್ಪತ್ರೆಯ ಬಳಿ ಅವರನ್ನು ನೋಡಲು ಅಭಿಮಾನಿಗಳ ಸಾಗರದಂತೆ ಹರಿದು ಬಂದಿದ್ದರು. ಹಾಗಾಗಿ, ಮಹದೇವಪುರದ ಸುತ್ತಮುತ್ತಲ ಪ್ರದೇಶದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು.



ಬೆಂಗಳೂರಿನ ಮಹದೇವಪುರ ಮತ್ತು ಎಲೆಕ್ಟ್ರಾನಿಕ್ ಸಿಟಿ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಉಂಟಾಯಿತು. ಸುಮಾರು ಐದು ಕಿಲೋಮೀಟರ್‌ವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಪ್ರಯಾಣಿಕರಿಗೆ ಸ್ವಲ್ಪ ತೊಂದರೆಯಾಯಿತು. ಪೊಲೀಸರ ಅಂದಾಜಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಬಂದಿದ್ದರಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ವಿಶೇಷ ಕ್ರಮ ಕೈಗೊಳ್ಳಬೇಕಾಯಿತು. ಟ್ರಾಫಿಕ್ ಕ್ಲಿಯರ್ ಮಾಡಲು ಪೊಲೀಸರು ಹರಸಾಹಸ ಪಟ್ಟರು. ಅಲ್ಲದೇ, ಕೆಲ ಅಭಿಮಾನಿಗಳನ್ನು ನಿಯಂತ್ರಿಸಲು ಸಾಧ್ಯವಾಗದೇ ಅವರ ಮೇಲೆ ಲಾಠಿ ಬೀಸಿದ್ದಾರೆ.



ಅದ್ದೂರಿ 15ನೇ ವಿವಾಹ ವಾರ್ಷಿಕೋತ್ಸವ

# ವಿವಾಹ ವಾರ್ಷಿಕೋತ್ಸವಕ್ಕೆ ಪತ್ನಿ ಸ್ನೇಹಾಗೆ 4 ಕೋಟಿ ರೂ. ಕಾರು ಕೊಟ್ಟ ಅಲ್ಲು ಅರ್ಜುನ್

ಅಲ್ಲು ಅರ್ಜುನ್ ಸಹೋದರ ಮತ್ತು ನಾಯಕ ಅಲ್ಲು ಸಿರೀಶ್ ಮತ್ತು ನಯನಿಕಾ ರೆಡ್ಡಿ ಅವರ ವಿವಾಹ ಸಮಾರಂಭವು ಅದ್ದೂರಿಯಾಗಿ ನಡೆಯಿತು. ಹೈದರಾಬಾದ್‌ನಲ್ಲಿ ನಡೆದ ಈ ಅದ್ದೂರಿ ವಿವಾಹದಲ್ಲಿ ಎರಡೂ ಕುಟುಂಬ ಸದಸ್ಯರು, ಆಪ್ತರು, ಸ್ನೇಹಿತರು ಮತ್ತು ಅನೇಕ ಚಲನಚಿತ್ರ ಗಣ್ಯರು ಭಾಗವಹಿಸಿದ್ದರು. ವಿಶೇಷವಾಗಿ ಇಡೀ ಮೆಗಾ ಕುಟುಂಬ ಅಲ್ಲು ಸಿರೀಶ್ ಅವರ ಅದ್ದೂರಿ ವಿವಾಹದಲ್ಲಿ ಸಡಗರದಿಂದ ಭಾಗವಹಿಸಿತು. ಇದಕ್ಕೆ ಸಂಬಂಧಿಸಿದ ಫೋಟೋಗಳು ಮತ್ತು ವಿಡಿಯೋಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿವೆ. ಈ ಮಧ್ಯೆ ಮತ್ತೊಂದು ವಿಶೇಷ ಘಟನೆ ನಡೆದಿದೆ. ಅಲ್ಲು ಅರ್ಜುನ್ ಅವರ ವಿವಾಹದ ದಿನದಂದು ಅಲ್ಲು ಸಿರೀಶ್ ಕೂಡ ಮದುವೆ ಮಂಟಪವನ್ನು ಪ್ರವೇಶಿಸಿದ್ದು ಗಮನಾರ್ಹ. ಇದರೊಂದಿಗೆ, ಅಲ್ಲು ಸಿರೀಶ್ ಮತ್ತು ಅಲ್ಲು ಅರ್ಜುನ್ ಅವರಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಶುಭಾಶಯಗಳು ಮತ್ತು ಅಭಿನಂದನೆಗಳ ಸುರಿಮಳೆಯಾಯಿತು. 2011ರಲ್ಲಿ ವಿವಾಹವಾದ ಅಲ್ಲು ಅರ್ಜುನ್ ಮತ್ತು ಸ್ನೇಹಾ ರೆಡ್ಡಿ ತಮ್ಮ 15ನೇ ವಿವಾಹ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಆಚರಿಸಿದರು. ಅಲ್ಲು ಅರ್ಜುನ್ ತಮ್ಮ ಪತ್ನಿ ಸ್ನೇಹಾ ರೆಡ್ಡಿಗೆ ಮರೆಯಲಾಗದ ಉಡುಗೊರೆಯನ್ನು ನೀಡಿದರು. ಅಲ್ಲು ಅರ್ಜುನ್ ತಮ್ಮ ಪತ್ನಿಯ ವಿವಾಹ ವಾರ್ಷಿಕೋತ್ಸವಕ್ಕೆ ಶುಭ ಹಾರೈಸಿದರು ಮತ್ತು ಅವರಿಗೆ ಮರ್ಸಿಡಿಸ್-ಎಎಂಜಿ ಮಾದರಿಯ ಕಾರನ್ನು ಉಡುಗೊರೆಯಾಗಿ ನೀಡಿದರು. ಅದರ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಬೆಂಜ್ ಎಎಂಜಿ ಮಾಡೆಲ್ ಕಾರಿನ ಪ್ರಸ್ತುತ ಮಾರುಕಟ್ಟೆ ಬೆಲೆ ಸುಮಾರು 4-5 ಕೋಟಿ 2 ರೂ. ಅಲ್ಲು ಅರ್ಜುನ್-ಸ್ನೇಹಾ ರೆಡ್ಡಿ ಪ್ರೇಮ ವಿವಾಹ ಆದರು. ಅವರು 2011ರಲ್ಲಿ ವಿವಾಹವಾದರು. ಈಗ ಅವರಿಗೆ ಅಯಾನ್ ಮತ್ತು ಅರ್ಹಾ ಎಂಬ ಮಕ್ಕಳಿದ್ದಾರೆ.

# ಧುರಂಧರ್ 2 ಟ್ರೈಲರ್ ರಿಲೀಸ್ ರಿವೆಂಜ್ ಮೋಡ್‌ನಲ್ಲಿ ರಣವೀರ್ ಸಿಂಗ್



ಆದಿತ್ಯ ಧಾರ್ ಅವರ ಧುರಂಧರ್ ಚಿತ್ರದ ಬ್ಲಾಕ್‌ಬಸ್ಟರ್ ಯಶಸ್ಸಿನ ನಂತರ, ತಂಡವು ಈಗ ಮಾ.19 ರಂದು 'ಧುರಂಧರ್: ದಿ ರಿವೆಂಜ್' ರಿಲೀಸ್‌ಗೆ ಸಜ್ಜಾಗುತ್ತಿದೆ. ಧುರಂದರ್-2 ಟ್ರೈಲರ್ ರಿಲೀಸ್ ಆಗಿದ್ದು, ರಿವೇಂಜ್ ಮೋಡ್‌ನಲ್ಲಿ ರಣವೀರ್ ಸಿಂಗ್ ಮಿಂಚಿದ್ದಾರೆ. ರೆಹಮಾನ್ ದಕೈತ್ ಮರಣದ ನಂತರ ಪಾಕಿಸ್ತಾನದ ಲಿಯಾರಿ ಪಟ್ಟಣದ ನಿಯಂತ್ರಣಕ್ಕೆ ತೆಗೆದುಕೊಳ್ಳಲು ರಣವೀರ್ ಸಿಂಗ್ ಮಾರಕ ಸೇಡಿನ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಮೂರು ನಿಮಿಷ 25 ಸೆಕೆಂಡುಗಳ ಟ್ರೈಲರ್ ಭಯಾನಕವಾಗಿದೆ. ಸಿನಿಮಾದ ಫಸ್ಟ್ ಪಾರ್ಟ್ ಪ್ರೇಕ್ಷಕರಿಗೆ ಎರಡು ಭಾಗಗಳ ಬೇಹುಗಾರಿಕೆಯ ಸಾಹಸಗಾಥೆಯನ್ನು ಪರಿಚಯಿಸಿತ್ತು.

ಈ ಕಥೆಯು ಕರಾಚಿಯಲ್ಲಿ ರಹಸ್ಯವಾಗಿ ಕೆಲಸ ಮಾಡುವ ಭಾರತೀಯ ಗುಪ್ತಚರ ಕಾರ್ಯಕರ್ತನೊಬ್ಬ, ಭಾರತದ ಭದ್ರತೆಗೆ ಬೆದರಿಕೆ ಹಾಕುವ ಭಯೋತ್ಪಾದಕ ಗುಂಪನ್ನು ನಾಶಮಾಡಲು ಕ್ರಿಮಿನಲ್ ಜಾಲಗಳು ಮತ್ತು ರಾಜಕೀಯ ವಲಯಗಳನ್ನು ನ್ಯಾವಿಗೇಟ್ ಮಾಡುವುದನ್ನು ತೋರಿಸುತ್ತದೆ. ಧುರಂಧರ್ 2 ಪಾಕಿಸ್ತಾನದ ಭೂಗತ ಲೋಕದಲ್ಲಿ ಈಗ ದೃಢವಾಗಿ ನೆಲೆಗೊಂಡಿರುವ ರಹಸ್ಯ ಭಾರತೀಯ ಏಜೆಂಟ್ ಹಮ್ಜಾ ಅಲಿ ಮಜಾರಿಯೊಂದಿಗೆ ನಿರೂಪಣೆಯನ್ನು ಮುಂದುವರಿಸುತ್ತದೆ. ರಣವೀರ್ ಸಿಂಗ್ ಹಿಂದೆಂದೂ ನೋಡಿರದ ಅವತಾರದಲ್ಲಿ ಖಡಕ್ ಆಗಿ ಕಾಣಿಸಿಕೊಂಡಿದ್ದಾರೆ.

# ಉಸ್ತಾದ್ ಭಗತ್ ಸಿಂಗ್ ಟೀಸರ್ ಔಟ್: ಖಡಕ್ ಪೊಲೀಸ್ ಆದ ಆಂಧ್ರ ಡಿಸಿಎಂ



ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿ ಹಾಗೂ ನಟ ಪವನ್ ಕಲ್ಯಾಣ್ ಅಭಿನಯದ ಉಸ್ತಾದ್ ಭಗತ್ ಸಿಂಗ್ ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ರಾಜಕೀಯ ಜವಾಬ್ದಾರಿಗಳ ನಡುವೆ ಸಿನಿಮಾಗಳಲ್ಲೂ ತೊಡಗಿಸಿಕೊಂಡಿರುವ ಪವನ್ ಕಲ್ಯಾಣ್ ಅಭಿನಯದ ಈ ಚಿತ್ರಕ್ಕೆ ಅಭಿಮಾನಿಗಳಲ್ಲಿ ಭಾರಿ ನಿರೀಕ್ಷೆ ಮೂಡಿದೆ.

ಸುಮಾರು 43 ಸೆಕೆಂಡುಗಳ ಟೀಸರ್‌ನಲ್ಲಿ ಪವನ್ ಕಲ್ಯಾಣ್ ಖಡಕ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ.

ಗಬ್ಬರ್ ಸಿಂಗ್ ಶೈಲಿಯಲ್ಲೇ ಹಾಸ್ಯ ಮತ್ತು ಆಕ್ಷನ್ ಮಿಶ್ರಿತ ಪಾತ್ರದಲ್ಲಿ ಅವರು ಮಿಂಚಿದ್ದು, ಟೀಸರ್‌ನಲ್ಲಿ ಕೆಲವು ಪಂಚಿಂಗ್ ಡೈಲಾಗ್‌ಗಳು ಹಾಗೂ ಆಕ್ಷನ್ ದೃಶ್ಯಗಳು ಗಮನ ಸೆಳೆಯುತ್ತವೆ. ಈ ಚಿತ್ರವನ್ನು ನಿರ್ದೇಶಕ ಹರೀಶ್ ಶಂಕರ್ ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಕನ್ನಡದ ನಟಿ ಶ್ರೀಲೀಲಾ ನಾಯಕಿಯಾಗಿ ಅಭಿನಯಿಸಿದ್ದು ಮೈತ್ರಿ ಮೂವಿ ಮೇಕರ್ಸ್ ನಿರ್ಮಾಣ ಮಾಡಿದೆ. ಮೊದಲು ಸಂಗೀತ ನಿರ್ದೇಶಕರಾಗಿ ದೇವಿ ಶ್ರೀ ಪ್ರಸಾದ್ ಹೆಸರು ಇದ್ದರೂ, ಟೀಸರ್‌ನಲ್ಲಿ ಎಸ್. ತಮನ್ ಅವರ ಹೆಸರು ಕಾಣಿಸಿಕೊಂಡಿದೆ. ಮಾರ್ಚ್ 26ರಂದು ಬಿಡುಗಡೆಯಾಗಬೇಕಿದ್ದ ಈ ಚಿತ್ರವನ್ನು ಈಗ ಒಂದು ವಾರ ಮುಂಚಿತವಾಗಿ ಮಾರ್ಚ್ 19ರಂದು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. 'ಟಾಕ್ಸಿಕ್' ಚಿತ್ರದ ಬಿಡುಗಡೆ ದಿನಾಂಕ ಬದಲಾದ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪವನ್ ಕಲ್ಯಾಣ್ ಉಪಮುಖ್ಯಮಂತ್ರಿಯಾದ ಬಳಿಕ ಬಿಡುಗಡೆಯಾಗುತ್ತಿರುವ ಮೂರನೇ ಚಿತ್ರ ಇದಾಗಿದೆ.

# ವಿಷ್ಣುದಾದಾಗೂ, ಗಣೇಶ್ ಕೈಯಲ್ಲಿರೋ ಬಳೆಗೂ ಲಿಂಕ್ ಇದೆಯಾ?

ಗೋಲ್ಡನ್ ಸ್ಟಾರ್ ಗಣೇಶ್ ಅದೆಂತಹ ಅಭಿಮಾನಿ ರೀ.! ಇಲ್ಲಿವರೆಗೂ ಗೊತ್ತೇ ಇರಲಿಲ್ಲ. ವಿಷ್ಣುವರ್ಧನ್ ಅಂದ್ರೆ ಇವರಿಗೆ ಪಂಚ ಪ್ರಾಣ ನೋಡಿ. ಇವರ ಬಹುತೇಕ ಚಿತ್ರಗಳನ್ನ ಬ್ಲ್ಯಾಕ್ ಟಿಕೆಟ್ ತೆಗೆದುಕೊಂಡೆ ನೋಡಿದ್ದಾರೆ. ಹಾಲುಂಡ ತವರು ಚಿತ್ರದಲ್ಲಿ ವಿಷ್ಣುವರ್ಧನ್ ಹೋಗಿ ಬಿಡ್ತಾರೆ. ಆಗ ಇದೆಂತಹ ಚಿತ್ರ ಅಂತ ಬೇಸರ ಮಾಡಿಕೊಂಡು ಥಿಯೇಟರ್‌ನಿಂದ ಎದ್ದು ಬಂದಿರೋದು ಇದೆ. ವಿಷ್ಣುವರ್ಧನ್ ಅವರನ್ನ ಮೀಟ್ ಆಗಬೇಕು ಅಂತ ಮುಂಗಾರು ಮಳೆ ಗೆದ್ದ ಮೇಲೆ ಅಂದುಕೊಂಡಿದ್ರು. ಆಗಲೆ ಆ ಹುಡುಗನನ್ನ ಕರೀರಿ ಅಂತ ವಿಷ್ಣುವರ್ಧನ್ ಅವರೇ ಬರ ಹೇಳಿದ್ದರು.

ಆ ರೀತಿ ವಿಷ್ಣುವರ್ಧನ್ ಕಟ್ಟಾ ಅಭಿಮಾನಿ ಆಗಿರೋ ಗೋಲ್ಡನ್ ಸ್ಟಾರ್ ಗಣೇಶ್ ಈಗೊಂದಷ್ಟು ಇಂಟ್ರಸ್ಟಿಂಗ್ ವಿಷಯ ಹಂಚಿಕೊಂಡಿದ್ದಾರೆ. ಅದರ ಚಿತ್ರಣ ನಾನು ವಿಷ್ಣುವರ್ಧನ್ ಅವರ ಮನೆಗೆ ಹೋಗಿದ್ದೆ. ಮನೆಯ ಲಾನ್ ಬಳಿಗೆ ಹೋದೆ. ಅಲ್ಲಿ ವಿಷ್ಣುವರ್ಧನ್ ಸರ್ ಬಂದರು. ಹೆಚ್ಚು ಕಡಿಮೆ ಅರ್ಧ ಗಂಟೆ ಅವರನ್ನೆ ನೋಡ್ತಾನೇ ಇದ್ದೆ. ಏನಂದ್ರೆ ಏನೂ ಮಾತ್ ಆಡಲೇ ಇಲ್ಲ.

**ನನ್ನ ಕೈಯಲ್ಲೂ ಬಳೆ ಇದೆ:** ವಿಷ್ಣುವರ್ಧನ್ ಅವರ ಕೈಲ್ಲಿ ಬಳೆ ಇತ್ತು. ಅದನ್ನ ಬೀದರನಲ್ಲಿರೋ ಗುರುದ್ವಾರದಲ್ಲಿ ಕೊಟ್ಟಿದ್ದರು. ಈ ವಿಷಯ ಹೇಳ್ತಾನೆ, ನನ್ನ ಕೈಯಲ್ಲೂ ಬಳೆ ಇದೆ ಅಂತಲೇ ಗಣೇಶ್ ಹೇಳಿದ್ದರು. ಇದನ್ನ ನೋಡಿದ ವಿಷ್ಣುವರ್ಧನ್ ಒಂದು ಮಾತು ಹೇಳಿದ್ದರು. ಸಂತೋಷವಾಗಿ ಇರೋದು ಬೇರೆ. ಸಂತೋಷವಾಗಿ ಕಾಣಿಸಿಕೊಳ್ಳುವುದು ಬೇರೆ ಅಂತಲೇ ಹೇಳಿದ್ದರು. ಈ ಒಂದು ಮಾತನ್ನೆ ಗಣೇಶ್ ವೇದಿಕೆ ಮೇಲೆ ವಿಷ್ಣುವರ್ಧನ್ ಅವರ ಧ್ವನಿಯಲ್ಲಿಯೇ ರಿಪೀಟ್ ಮಾಡಿದರು ನೋಡಿ.

ವಿಷ್ಣುವರ್ಧನ್ ಅವರ ಜೊತೆಗೆ ಒಂದು ಚಿತ್ರ ಮಾಡಬೇಕಿತ್ತು. ಆದರೆ, ಅದು ಆಗಲೇ ಇಲ್ಲ ನೋಡಿ. ಆದರೆ, ನಾನು ವಿಷ್ಣುವರ್ಧನ್ ಅವರ ಅಪ್ಪಟ ಅಭಿಮಾನಿ ಆಗಿದ್ದೇನೆ.





# ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕ್ರಿಕೆಟಿಗ ವೈಭವ್ ಸೂರ್ಯವಂಶಿ ಅಂಕಲ್ ಪಾಸ್

2025ರ ಯುಪಿಎಸ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು, ಕ್ರಿಕೆಟಿಗ ವೈಭವ್ ಸೂರ್ಯವಂಶಿ ಚಿಕ್ಕಪ್ಪ ಅಭಿಷೇಕ್ ಚೌಹಾಣ್ ಅವರು 102ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಭಾರತದ ಅಂಡರ್-19 ವಿಶ್ವಕಪ್ ಕ್ರಿಕೆಟಿಗ ವೈಭವ್ ಸೂರ್ಯವಂಶಿ ಅವರ ಚಿಕ್ಕಪ್ಪ ಅಭಿಷೇಕ್ ಚೌಹಾಣ್ ಅವರು ಯುಪಿಎಸ್‌ಸಿ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ತಮ್ಮ ಮೊದಲ ಪ್ರಯತ್ನದಲ್ಲೇ 102ನೇ ರ್‍ಯಾಂಕ್ ಪಡೆದಿದ್ದು, ಐಪಿಎಸ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಬಿಹಾರದ ಸಮಸ್ತಿಪುರ್ ಜಿಲ್ಲೆಯ ನಿವಾಸಿಯಾಗಿರುವ ಅಭಿಷೇಕ್ ಅವರು ಪ್ರೊಫೆಸರ್ ಡಾ. ಅಭಯ್ ಕುಮಾರ್ ಸಿಂಗ್ ಮತ್ತು ಅನುರಾಧಾ ರಜಪೂತ್ ಅವರ ಪುತ್ರ. ಅವರ ತಂದೆ ನಳಂದ ಮುಕ್ತ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಈ ಬಗ್ಗೆ ವೈಭವ್ ಅವರ ತಂದೆ ಸಂಜೀವ್ ಸೂರ್ಯವಂಶಿ ಸಂತೋಷ ವ್ಯಕ್ತಪಡಿಸಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. 2022ರಿಂದ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭಿಷೇಕ್ ಅವರು 2025ರಲ್ಲಿ ಪ್ರಾಥಮಿಕ ಮತ್ತು ಮುಖ್ಯ ಹಂತಗಳೆರಡಲ್ಲಿಯೂ ತೇರ್ಗಡೆಯಾದರು.





# ಏಕೈಕ ಟೆಸ್ಟ್‌ನಲ್ಲಿ ಭಾರತಕ್ಕೆ 10 ವಿಕೆಟ್ ಸೋಲು; ಆಸ್ಟ್ರೇಲಿಯಾಕ್ಕೆ ಬಹು-ಸ್ವರೂಪದ ಸರಣಿ



ಸರಣಿ ಗೆದ್ದುಕೊಂಡ ಆಸ್ಟ್ರೇಲಿಯಾ

ಮೂರು ಮಾದರಿಯ ಸರಣಿಗಾಗಿ ಆಸ್ಟ್ರೇಲಿಯಾ ಪ್ರವಾಸ ಮಾಡಿದ್ದ ಭಾರತ ವನಿತಾ ಪಡೆ ಮೊದಲು ನಡೆದ ಟಿ20 ಸರಣಿಯನ್ನು 2-1 ಅಂತರದಿಂದ ಗೆದ್ದು ಶುಭಾರಂಭ ಮಾಡಿತ್ತು. ಹೀಗಾಗಿ ಉಳಿದೆರಡು ಸರಣಿಗಳಲ್ಲೂ ಭಾರತದಿಂದ ಅದೇ ರೀತಿಯ ಪ್ರದರ್ಶನವನ್ನು ನಿರೀಕ್ಷಿಸಲಾಗಿತ್ತು. ಆದರೆ ಟಿ20 ಸರಣಿ ಬಳಿಕ ನಡೆದ ಏಕದಿನ ಸರಣಿ ಹಾಗೂ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡಕ್ಕೆ ಒಂದೇ ಒಂದು ಗೆಲುವು ದಕ್ಕಲಿಲ್ಲ. ಏಕದಿನ ಸರಣಿಯಲ್ಲಿ ವೈಟ್ ವಾಶ್ ಆಗಿದ್ದ ಹರ್ಮನ್‌ಪ್ರೀತ್ ಕೌರ್ ಪಡೆ, ಇದೀಗ ಏಕೈಕ ಟೆಸ್ಟ್ ಪಂದ್ಯವನ್ನು ಸಹ 10 ವಿಕೆಟ್‌ಗಳಿಂದ ಸೋತಿದೆ. ಪರ್ತ್‌ನ ವೆಸ್ಟರ್ನ್ ಆಸ್ಟ್ರೇಲಿಯಾ ಕ್ರಿಕೆಟ್ ಅಸೋಸಿಯೇಷನ್ ಮೈದಾನದಲ್ಲಿ ನಡೆದ ಹಗಲು-ರಾತ್ರಿ ಟೆಸ್ಟ್ ಪಂದ್ಯವನ್ನು ಆಸ್ಟ್ರೇಲಿಯಾ ಮಹಿಳಾ ತಂಡ ಸುಲಭವಾಗಿ ಗೆದ್ದುಕೊಂಡಿದೆ. ಈ ಪಂದ್ಯದಲ್ಲಿ ಹೀನಾಯ ಪ್ರದರ್ಶನ ನೀಡಿದ ಭಾರತ ವನಿತಾ ತಂಡ ಬಹು-ಸ್ವರೂಪದ ಸರಣಿಯನ್ನು ಕಳೆದುಕೊಂಡಿತು. ಮೂರು ದಿನವೂ ಪೂರ್ಣವಾಗಿ ನಡೆಯದೆ ಈ ಪಂದ್ಯವನ್ನು ಆಸ್ಟ್ರೇಲಿಯಾ ತಂಡ ಮೂರನೇ ದಿನದ ಮೊದಲ ಸೆಷನ್‌ನಲ್ಲಿಯೇ 10 ವಿಕೆಟ್‌ಗಳಿಂದ ಗೆದ್ದುಕೊಂಡಿತು.

**ಭಾರತದ ಬ್ಯಾಟಿಂಗ್ ವೈಫಲ್ಯ:** ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡ ಆಸ್ಟ್ರೇಲಿಯಾ ಮೊದಲ ಸೆಷನ್‌ಲ್ಲಿಯೇ ಪಂದ್ಯದ ಮೇಲೆ ಹಿಡಿತ ಸಾಧಿಸಿತು. ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ ತಂಡ 62.4 ಓವರ್‌ಗಳಲ್ಲಿ 198 ರನ್‌ಗಳಿಗೆ ಆಲೌಟ್ ಆಗಿತ್ತು. ಜೆಮಿಮಾ ರೊಡ್ರಿಗಸ್ ಅರ್ಧಶತಕ ಗಳಿಸಿದರೆ, ಇತರ ಬ್ಯಾಟ್ಸ್‌ಮನ್‌ಗಳು ಹೆಚ್ಚು ಸಮಯ ನಿಲ್ಲಲು ವಿಫಲರಾದರು.

ಆಸ್ಟ್ರೇಲಿಯಾ ಪರ ಅನ್ನಾಬೆಲ್ ಸದರ್ಲ್ಯಾಂಡ್ ಅತ್ಯಧಿಕ ನಾಲ್ಕು ವಿಕೆಟ್‌ಗಳನ್ನು ಪಡೆದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್‌ನಲ್ಲಿ 323 ರನ್‌ಗಳನ್ನು ಗಳಿಸಿ 125 ರನ್‌ಗಳ ಮುನ್ನಡೆ ಪಡೆದುಕೊಂಡಿತು. ಬೌಲಿಂಗ್ ನಂತರ ಬ್ಯಾಟಿಂಗ್‌ನಲ್ಲೂ ಅಬ್ಬರಿಸಿದ ಅನ್ನಾಬೆಲ್ಲೆ ಸದರ್ಲ್ಯಾಂಡ್ 129 ರನ್‌ಗಳ ಇನ್ನಿಂಗ್ಸ್ ಆಡಿದರು. ಎಲಿಸ್ ಪೆರ್ರಿ ಕೂಡ 76 ರನ್ ಗಳಿಸಿ, ಮಹಿಳಾ ಟೆಸ್ಟ್ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾದ ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯಾದರು. ಏತನ್ಮಧ್ಯೆ, ಭಾರತದ ಸಯಾಲಿ ಸತ್ಘರೆ ಚೊಚ್ಚಲ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದರಾದರೂ ಇತರ ಬೌಲರ್‌ಗಳ ವೈಫಲ್ಯದಿಂದ ಆಸ್ಟ್ರೇಲಿಯಾ ದೊಡ್ಡ ಮೊತ್ತವನ್ನು ಗಳಿಸುವುದನ್ನು ತಡೆಯಲು ಸಾಧ್ಯವಾಗಲಿಲ್ಲ.

**ಎರಡನೇ ಇನ್ನಿಂಗ್ಸ್‌ನಲ್ಲೂ ಕಳಪೆ ಬ್ಯಾಟಿಂಗ್:** ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತದ ಬ್ಯಾಟಿಂಗ್ ನಿರಾಶಾದಾಯಕವಾಗಿತ್ತು. ಸ್ಮೃತಿ ಮಂಧಾನ ಮತ್ತು ಶಫಾಲಿ ವರ್ಮಾ ಮತ್ತೊಮ್ಮೆ ಬೇಗನೆ ಔಟಾದರು. ಬೌಲಿಂಗ್‌ನಲ್ಲಿ ಸದರ್ಲ್ಯಾಂಡ್ ಮತ್ತು ಲೂಸಿ ಹ್ಯಾಮಿಲ್ಟನ್ ಮತ್ತೊಮ್ಮೆ ಮಿಂಚಿದರು. ಪರಿಣಾಮವಾಗಿ, ಈ ಇನ್ನಿಂಗ್ಸ್ ನಲ್ಲಿಯೂ ಭಾರತ ತಂಡವು 149 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಏಕಾಂಗಿ ಹೋರಾಟ ನೀಡಿದ ಪ್ರತೀಕಾ ರಾವಲ್ 63 ರನ್ ಬಾರಿಸಿದರು. ಅಂತಿಮವಾಗಿ ಆಸ್ಟ್ರೇಲಿಯಾಕ್ಕೆ 25 ರನ್‌ಗಳ ಗುರಿ ನಿಗದಿಯಾಯಿತು. ಆಸ್ಟ್ರೇಲಿಯಾ 4.3 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ ಈ ಗುರಿ ಬೆನ್ನಟ್ಟಿ ಟೆಸ್ಟ್ ಪಂದ್ಯವನ್ನು ಗೆದ್ದುಕೊಂಡಿತು. ಇದು 3 ಟಿ20, 3 ಏಕದಿನ ಮತ್ತು 1 ಟೆಸ್ಟ್ ಪಂದ್ಯಗಳನ್ನು ಒಳಗೊಂಡ ಬಹು-ಸ್ವರೂಪದ ಸರಣಿಯಾಗಿತ್ತು. ಭಾರತವು ಟಿ20 ಸರಣಿಯನ್ನು 2-1 ಅಂತರದಲ್ಲಿ ಗೆಲ್ಲುವ ಮೂಲಕ ಮುನ್ನಡೆ ಸಾಧಿಸಿತು. ಆದಾಗ್ಯೂ, ಅದರ ನಂತರ ಆಸ್ಟ್ರೇಲಿಯಾ ಬಲವಾದ ಪುನರಾಗಮನವನ್ನು ಮಾಡಿ ಏಕದಿನ ಸರಣಿಯನ್ನು 3-0 ಅಂತರದಿಂದ ಗೆದ್ದುಕೊಂಡರೆ, ಈಗ ಈ ಟೆಸ್ಟ್ ಪಂದ್ಯವನ್ನು ಗೆಲ್ಲುವ ಮೂಲಕ ಸರಣಿಯನ್ನು 5-2 ಅಂತರದಿಂದ ಗೆದ್ದುಕೊಂಡಿದೆ.

# ಕ್ರಿಕೆಟರ್ ಪೃಥ್ವಿ ಶಾ ಕೈ ಹಿಡಿಯಲಿದ್ದಾರೆ ತೆಲುಗು ನಟಿ!

ಕ್ರಿಕೆಟಿಗ ಪೃಥ್ವಿ ಶಾ ಅವರು ತಮ್ಮ ದೀರ್ಘಕಾಲದ ಗೆಳತಿ ಆಕೃತಿ ಅಗರ್ವಾಲ್ ಅವರೊಂದಿಗೆ ಮಾರ್ಚ್ 8, 2026 ರಂದು ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ತಮ್ಮ ಜೀವನದ ಈ ಹೊಸ ಇನ್ನಿಂಗ್ಸ್ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಫೋಟೋ ಹಂಚಿಕೊಂಡಿರುವ ಅವರು, ಮೈದಾನದಲ್ಲಿ ಸಿಕ್ಸರ್ ಬಾರಿಸುವುದರಿಂದ ಹಿಡಿದು ಮೈದಾನದ ಹೊರಗಿನ ಜೀವನದ ಹಿಟ್‌ಗಳವರೆಗೆ,ಇವಳೇ ನನ್ನ ಪರ್ಫೆಕ್ಟ್ ಇನ್ನಿಂಗ್ಸ್ ಎಂದು ಬರೆದುಕೊಂಡಿದ್ದಾರೆ. ಭಾರತೀಯ ಕ್ರಿಕೆಟ್ ಲೋಕದ ಸ್ಫೋಟಕ ಬ್ಯಾಟರ್, 'ಜೂನಿಯರ್ ಸಚಿನ್' ಎಂದೇ ಖ್ಯಾತರಾದ ಪೃಥ್ವಿ ಶಾ ಇಂದು ತಮ್ಮ ಜೀವನದ ಅತ್ಯಂತ ಸ್ಮರಣೀಯ ಇನ್ನಿಂಗ್ಸ್ ಆರಂಭಿಸಿದ್ದಾರೆ. ಕಳೆದ ಕೆಲವು ಸಮಯದಿಂದ ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದ್ದ ಗಾಸಿಪ್‌ಗಳಿಗೆ ಇಂದು ಅಧಿಕೃತ ತೆರೆ ಬಿದ್ದಿದೆ. ಪೃಥ್ವಿ ಶಾ ತಮ್ಮ ದೀರ್ಘಕಾಲದ ಗೆಳತಿ, ನಟಿ ಹಾಗೂ ಪ್ರಭಾವಿ ಸೋಷಿಯಲ್ ಮೀಡಿಯಾ ಸ್ಟಾರ್ ಆಕೃತಿ ಅಗರ್ವಾಲ್ ಅವರೊಂದಿಗೆ ನಿಶ್ಚಿತಾರ್ಥ ಮಾಡಿಕೊಳ್ಳುವ ಮೂಲಕ ವೈವಾಹಿಕ ಜೀವನಕ್ಕೆ ಕಾಲಿಡಲು ಸಿದ್ಧರಾಗಿದ್ದಾರೆ. ಮುಂಬೈನ ಪ್ರತಿಷ್ಠಿತ ಹೋಟೆಲ್‌ನಲ್ಲಿ ನಡೆದ ಈ ಖಾಸಗಿ ಸಮಾರಂಭದಲ್ಲಿ ಕೇವಲ ಆಪ್ತರು ಮತ್ತು ಕುಟುಂಬದ ಸದಸ್ಯರು ಮಾತ್ರ ಭಾಗವಹಿಸಿದ್ದರು.



# ರಿಷಭ್ ಪಂತ್ ಜೊತೆ ಕಾಣಿಸಿಕೊಂಡ ಯುವಿ

ಯುವರಾಜ್ ಸಿಂಗ್ ಬಹುಶಃ ಭಾರತ ಕಂಡ ಅತ್ಯಂತ ಪ್ರತಿಭಾನ್ವಿತ ವೈಟ್-ಬಾಲ್ ಕ್ರಿಕೆಟಿಗ. ಇದೀಗ ಇಂದು ನಡೆಯಲಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಟಿ20 ವಿಶ್ವಕಪ್ 2026ರ ಫೈನಲ್ ಪಂದ್ಯದತ್ತ ಎಲ್ಲರ ಚಿತ್ತ ನೆಟ್ಟಿದೆ. ಅವರು ಈಗಾಗಲೇ ಭಾರತಕ್ಕಾಗಿ ಟಿ20ಐ ಮತ್ತು ಏಕದಿನ ವಿಶ್ವಕಪ್ ಎರಡನ್ನೂ ಗೆದ್ದಿದ್ದಾರೆ. ಇದೀಗ, ವಿಶ್ವಕಪ್ ನಂತರದ ಮುಂಬರುವ ಅತಿದೊಡ್ಡ ಪಂದ್ಯಾವಳಿಗೆ ಪುನರಾಗಮನವನ್ನು ಮಾಡಲು ಸಿದ್ಧವಾಗಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 19ನೇ ಆವೃತ್ತಿ ಮುಂದಿನ 20 ದಿನಗಳಲ್ಲಿ ಪುನರಾರಂಭಗೊಳ್ಳಲಿದೆ.



ಇತ್ತೀಚೆಗೆ, ಯುವರಾಜ್ ಸಿಂಗ್ ಲಕ್ನೋ ಸೂಪರ್ ಜೈಂಟ್ಸ್ (ಎಲ್‌ಎಸ್‌ಜಿ) ನಾಯಕ ಮತ್ತು ಭಾರತದ ಸದ್ಯದ ಸೂಪರ್ ಸ್ಟಾರ್ ರಿಷಭ್ ಪಂತ್ ಅವರೊಂದಿಗೆ ಕಾಣಿಸಿಕೊಂಡಿದ್ದಾರೆ. ವಾಸ್ತವವಾಗಿ, ತರಬೇತಿ ಪಡೆಯುತ್ತಿರುವಾಗ ಪಂತ್ ಅವರು ಯುವರಾಜ್ ಅವರೊಂದಿಗೆ ಮಾತನಾಡುತ್ತಿರುವ ಚಿತ್ರವನ್ನು ಸ್ವತಃ ಲಕ್ನೋ ಸೂಪರ್ ಜೈಂಟ್ಸ್ ಪೋಸ್ಟ್ ಮಾಡಿದೆ. 'ಐಪಿಎಲ್ 2026, ಸಿದ್ಧರಾಗಿ' ಎಂಬ ಶೀರ್ಷಿಕೆಯೊಂದಿಗೆ ಪೋಸ್ಟ್ ಮಾಡಿದೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**